ಅ)	ರಾಜ್ಯದ ಕೃಷಿಕರು ಬೆಳೆದ ಬೆಳೆಗಳು ನಷ್ಟವಾದಲ್ಲಿ ಸರ್ಕಾರ ಪರಿಹಾರ ನೀಡಲು ಬೆಳೆವಾರು ಬೆಂಬಲ ಬೆಲೆಯನ್ನು ನಿಗದಿಪಡಿಸಿದೆಯೇ; (ಬೆಳೆವಾರು ಬೆಂಬಲ ಬೆಲೆಯ ಸಂಪೂರ್ಣ ಮಾಹಿತಿ ಒದಗಿಸುವುದು)	ರಾಜ್ಯದಲ್ಲಿ ಕೃಷಿಕರು ಬೆಳೆದ ಬೆಳೆಗಳು ನಷ್ಟವಾದಲ್ಲಿ ಪರಿಹಾರ ನೀಡಲು ಬೆಳೆವಾರು ಬೆಂಬಲ ಬೆಲೆಯನ್ನು ರಾಜ್ಯ ಸರ್ಕಾರವು ನಿಗದಿಪಡಿಸಿರುವುದಿಲ್ಲ. ಆದರೆ ಕೇಂದ್ರ ಸರ್ಕಾರವು 2018-19ನೇ ಸಾಲಿನ ಮುಂಗಾರು ಬೆಳೆಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸಿರುತ್ತಾರೆ. Commodity (Fair Average Quality) / Variety / Minimum Support Price (Rs. per quintal): Paddy / Common / 1750 Paddy / Grade A / 1770 Jowar / Hybrid / 2430 Jowar / Maldandi / 2450 Bajra / - / 1950 Ragi / - / 2897 Maize / - / 1700 ಹಾಗೆಯೇ ಸರ್ಕಾರದ ಆದೇಶ ಸಂಖ್ಯೆ:ಆನಾಸ/77/ಆರ್‌ಪಿಆರ್/2018, ದಿನಾಂಕ: 24.11.2018ರಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತವನ್ನು ಖರೀದಿಸಲು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ, ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಾರುಕಟ್ಟೆ ಮಹಾಮಂಡಳಿ ಇವುಗಳನ್ನು ಸಂಗ್ರಹಣಾ ಸಂಸ್ಥೆಗಳನ್ನಾಗಿ ನೇಮಿಸಿ ಅವುಗಳಿಗೆ ಜಿಲ್ಲೆಗಳನ್ನು ನಿಯೋಜಿಸಲಾಗಿರುತ್ತದೆ. ಈ ಸಂಗ್ರಹಣಾ ಸಂಸ್ಥೆಗಳು ಅವುಗಳಿಗೆ ನಿಯೋಜಿತವಾಗಿರುವ ಜಿಲ್ಲೆಗಳಲ್ಲಿ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಿ ರೈತರ ನೋಂದಾವಣೆಯನ್ನು ದಿನಾಂಕ: 05.12.2018 ರಿಂದ ಆರಂಭಿಸಿರುತ್ತಾರೆ. ಪ್ರಸ್ತುತ ರಾಜ್ಯದಲ್ಲಿ 104 ಭತ್ತ ಖರೀದಿ ಕೇಂದ್ರಗಳನ್ನು ತೆರೆಯಲಾಗಿರುತ್ತದೆ.
ಆ)	ಈ ಬೆಂಬಲ ಬೆಲೆ ನಿಗದಿಪಡಿಸಲು ಸರ್ಕಾರ ಅನುಸರಿಸುವ ಮಾನದಂಡಗಳೇನು; (ವಿವರ ನೀಡುವುದು)	ಬೆಂಬಲ ಬೆಲೆ ಯೋಜನೆಯಡಿ ಪ್ರತಿ ವರ್ಷವೂ ಕೇಂದ್ರ ಸರ್ಕಾರದಿಂದ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿ ಪಡಿಸಿ ಪ್ರಕಟಿಸುತ್ತಾರೆ. ಹಾಗಾಗಿ ಬೆಂಬಲ ಬೆಲೆಯನ್ನು ಪ್ರಕಟಿಸಲು ಕೇಂದ್ರ ಸರ್ಕಾರದಿಂದಲೇ ಮಾನದಂಡಗಳನ್ನು ನಿಗದಿ ಪಡಿಸಿರುತ್ತಾರೆ. ರಾಜ್ಯ ಸರ್ಕಾರದ ಪಾತ್ರ ಇರುವುದಿಲ್ಲ.
ಇ)	ಹಾಗಿಲ್ಲದಿದ್ದಲ್ಲಿ, ಬೆಳೆಗಳಿಗೆ ಬೆಲೆಯನ್ನು ನಿಗದಿಪಡಿಸಲು ಸರ್ಕಾರ ವಿಶೇಷ ಆಯೋಗವನ್ನು ರಚಿಸುವುದೇ; ಹಾಗಿದ್ದಲ್ಲಿ, ಇದರ ರೂಪುರೇಷೆಗಳೇನು? (ವಿವರ ನೀಡುವುದು)	ರಾಜ್ಯದಲ್ಲಿ ಕೂಡಾ ಕೃಷಿ ಬೆಲೆ ಆಯೋಗವನ್ನು ಕೃಷಿ ಇಲಾಖೆಯ ವ್ಯಾಪ್ತಿಯಲ್ಲಿ ರಚಿಸಲಾಗಿದ್ದು, ಹೆಚ್ಚಿನ ಮಾಹಿತಿಯನ್ನು ಕೃಷಿ ಇಲಾಖೆಯಿಂದ ಪಡೆಯಬಹುದಾಗಿರುತ್ತದೆ.

ಆನಾಸ 92 ಆರ್‌ಪಿಆರ್ 2018

(ಬಿ. ಜೆಡ್. ಜಮೀರ್ ಅಹ್ಮದ್ ಖಾನ್)
ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ
ಹಾಗೂ ಕಾನೂನು ಮಾಪನಶಾಸ್ತ್ರ, ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು
ವಕ್ಫ್ ಹಾಗೂ ಹಜ್ ಇಲಾಖಾ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ:ಸಕಇ 619 ವಿಕಲ 2018

ಕರ್ನಾಟಕ ಸರ್ಕಾರದ ಸಚಿವಾಲಯ
ಸುವರ್ಣಸೌಧ,
ಬೆಳಗಾವಿ, ದಿನಾಂಕ: 19-12-2018

118
U/S 21/12/18

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಮಾಜ ಕಲ್ಯಾಣ ಇಲಾಖೆ,
ಬೆಳಗಾವಿ.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/~~ಪರಿಷತ್ತು~~,
ಸುವರ್ಣಸೌಧ,
ಬೆಳಗಾವಿ.

ಮಾನ್ಯರೇ,

ವಿಷಯ:- ಮಾನ್ಯ ವಿಧಾನ ಸಭೆ/~~ಪರಿಷತ್~~ ಸದಸ್ಯರಾದ ಶ್ರೀ/~~ಶ್ರೀಮತಿ~~ ಮಹಾದೇವಪ್ಪ ಶಿ. ಯಾದವಾಡ ಇವರ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ:2276/~~ನಿಯಮ-73/ /ಗ.ಸೆ.ಸೂ-351~~ ಕ್ಕೆ ಉತ್ತರಿಸುವ ಬಗ್ಗೆ

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ/~~ಪರಿಷತ್~~ ಸದಸ್ಯರಾದ ಶ್ರೀ/~~ಶ್ರೀಮತಿ~~ ಮಹಾದೇವಪ್ಪ ಶಿ. ಯಾದವಾಡ ಇವರ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2276 /~~ನಿಯಮ-73/ /ಗ.ಸೆ.ಸೂ-351~~ಕ್ಕೆ ಸಂಬಂಧಿಸಿದ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

ಶಾಖಾಧಿಕಾರಿ,
ಸಮಾಜ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2276
ಸದಸ್ಯರ ಹೆಸರು : ಶ್ರೀ ಮಹದೇವಪ್ಪ ಶಿವಲಿಂಗಪ್ಪ ಯಾದವಾಡ
ಉತ್ತರಿಸುವ ದಿನಾಂಕ : 21-12-2018
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	2017-18ನೇ ಸಾಲಿನಲ್ಲಿ ರಾಮದುರ್ಗ ತಾಲ್ಲೂಕಿನಲ್ಲಿ ಎಷ್ಟು ಅಂಬೇಡ್ಕರ್ ಭವನ ನಿರ್ಮಾಣ ಮಾಡಲು ಮಂಜೂರಾತಿ ನೀಡಿದೆ; ಎಷ್ಟು ಮೊತ್ತ ಬಿಡುಗಡೆ ಮಾಡಿದೆ (ವಿವರ ಒದಗಿಸುವುದು);	2017-18ನೇ ಸಾಲಿನಲ್ಲಿ ರಾಮದುರ್ಗ ತಾಲ್ಲೂಕಿಗೆ 26 ಡಾ:ಬಿ.ಆರ್.ಅಂಬೇಡ್ಕರ್ ಭವನಗಳನ್ನು ತಲಾ ರೂ 12.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ನಿರ್ಮಾಣ ಮಾಡಲು ತಾತ್ವಿಕ ಮಂಜೂರಾತಿ ನೀಡಲಾಗಿದೆ. ಸದರಿ ಭವನಗಳಿಗೆ ನಿವೇಶನ ಪಡೆಯಲಾಗಿದ್ದು, ಅನುದಾನ ಲಭ್ಯತೆ ಆಧರಿಸಿ ಮಂಜೂರಾತಿ ನೀಡಿ ಅನುದಾನ ಬಿಡುಗಡೆ ಮಾಡಲಾಗುವುದು. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಆ)	ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಬಾಕಿಯಿರುವ ಪ್ರಸ್ತಾವನೆಗಳಿಗೆ ಯಾವಾಗ ಮಂಜೂರಾತಿ ನೀಡಲಾಗುವುದು; ಈವರೆಗೆ ಹಣ ಬಿಡುಗಡೆ ಮಾಡದಿರಲು ಕಾರಣವೇನು?	ಕ್ರಮ ಸಂಖ್ಯೆ: (ಅ) ಪ್ರಶ್ನೆಗೆ ನೀಡಿರುವ ಉತ್ತರದಲ್ಲಿ ವಿವರಿಸಲಾಗಿದೆ.

ಸಕಇ 619 ಪಕವಿ 2018

(ಪ್ರಿಯಾಂಕ್ ಖರ್ಗೆ)
ಸಮಾಜ ಕಲ್ಯಾಣ ಸಚಿವರು.

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:-2276 ಕ್ಕೆ ಅನುಬಂಧ

ಜಿಲ್ಲೆಯ ಹೆಸರು: ಬೆಳಗಾವಿ ತಾಲ್ಲೂಕು:-ರಾಮದುರ್ಗ

ರೂ ಲಕ್ಷಗಳಲ್ಲಿ

ಕ್ರಸಂ	ವರ್ಷ	ಭವನದ ವಿವರ	ತಾಲ್ಲೂಕು	ಸ್ಥಳ	ಮಂಜೂರಾತಿ ಮೊತ್ತ	ಬಿಡುಗಡೆ ಮೊತ್ತ	ಬಾಕಿ ಬಿಡುಗಡೆ ಮೊತ್ತ
1	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಚಿಪ್ಪಲಕಟ್ಟಿ	12.00	0.00	12.00
2	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಕುನ್ನಾಳ	12.00	0.00	12.00
3	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಮುರಕಟ್ನಾಳ	12.00	0.00	12.00
4	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಉದಪುಡಿ	12.00	0.00	12.00
5	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಉಮತಾರ	12.00	0.00	12.00
6	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಕರಡಿಗುಡ್ಡ	12.00	0.00	12.00
7	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಹಿರೇಮೂಲಂಗಿ	12.00	0.00	12.00
8	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಚಿಕ್ಕಮೂಲಂಗಿ	12.00	0.00	12.00
9	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಗೊಡಚಿ	12.00	0.00	12.00
10	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ತೋಟಗಟ್ಟಿ	12.00	0.00	12.00
11	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಚಿಕ್ಕಹಂಪಿಹೊಳಿ	12.00	0.00	12.00
12	2017-18	ಡಾ:ಬಿ.ಆರ್ ಅಂಬೇಡ್ಕರ್ ಭವನ	ರಾಮದುರ್ಗ	ಪದಮಂಡಿ	12.00	0.00	12.00
13	2017-18	ಡಾ:ಬಿ.ಆರ್ ಅಂಬೇಡ್ಕರ್ ಭವನ	ರಾಮದುರ್ಗ	ಶಿದ್ನಾಳ	12.00	0.00	12.00
14	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಚಿಲಮೂರ	12.00	0.00	12.00
15	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಸುನ್ನಾಳ	12.00	0.00	12.00
16	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಕಂಕಣವಾಡಿ	12.00	0.00	12.00
17	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಬೋಚಬಾಳ	12.00	0.00	12.00
18	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಮಾಗನೂರ	12.00	0.00	12.00
19	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ರಾಮಾಪೂರ	12.00	0.00	12.00
20	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಕಾಮನಕೊಪ್ಪ	12.00	0.00	12.00
21	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಘಟಕನೂರ	12.00	0.00	12.00
22	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಚಂಚಬಂಡಿ	12.00	0.00	12.00
23	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಹುಲಿಗೊಪ್ಪ	12.00	0.00	12.00
24	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಕಲ್ಲಿಕೊಪ್ಪ	12.00	0.00	12.00
25	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಶಿವಪೇಠ	12.00	0.00	12.00
26	2017-18	ಡಾ:ಬಿ.ಆರ್. ಅಂಬೇಡ್ಕರ್ ಭವನ	ರಾಮದುರ್ಗ	ಆತ್ಮಾನಂದನಗರ	12.00	0.00	12.00
ಒಟ್ಟು					312.00	0.00	312.00

ಕರ್ನಾಟಕ ಸರ್ಕಾರ

ಸಂಖ್ಯೆ:ಸಕಇ 623 ಪ್ರಶೋಲಿ 2018

ಕರ್ನಾಟಕ ಸರ್ಕಾರದ ಸಚಿವಾಲಯ
ಸುವರ್ಣಸೌಧ.
ಬೆಳಗಾವಿ, ದಿನಾಂಕ: 19 -12-2018

139
U/S
21/12/18

ಇವರಿಂದ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಮಾಜ ಕಲ್ಯಾಣ ಇಲಾಖೆ,
ಬೆಳಗಾವಿ.

ಇವರಿಗೆ:
ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ/~~ಪರಿಷತ್ತು~~,
ಸುವರ್ಣಸೌಧ,
ಬೆಳಗಾವಿ.

ಮಾನ್ಯರೇ,

ವಿಷಯ:- ಮಾನ್ಯ ವಿಧಾನ ಸಭೆ/~~ಪರಿಷತ್~~ ಸದಸ್ಯರಾದ ಶ್ರೀ/~~ಶ್ರೀಮತಿ~~ ಪ್ರಭು. B. ಚವ್ಹಾಣ್ ಇವರ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ:127 /~~ನಿಯಮ-73/~~ /~~ಗ.ಸೆ.ಸೂ-351~~ ಕ್ಕೆ ಉತ್ತರಿಸುವ ಬಗ್ಗೆ

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ/~~ಪರಿಷತ್~~ ಸದಸ್ಯರಾದ ಶ್ರೀ/~~ಶ್ರೀಮತಿ~~ ಪ್ರಭು. B. ಚವ್ಹಾಣ್ ಇವರ ಚುಕ್ಕೆ ~~ಗುರುತಿನ~~/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 127 /~~ನಿಯಮ-73/~~ /~~ಗ.ಸೆ.ಸೂ-351~~ಕ್ಕೆ ಸಂಬಂಧಿಸಿದ ಉತ್ತರದ 350 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ತಮಗೆ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಸಹಿ)

ಶಾಖಾಧಿಕಾರಿ,
ಸಮಾಜ ಕಲ್ಯಾಣ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 127
ಸದಸ್ಯರ ಹೆಸರು : ಶ್ರೀ ಪ್ರಭು ಬಿ.ಚೌವ್ಹಾಣ್
ಉತ್ತರಿಸುವ ದಿನಾಂಕ : 21-12-2018
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆ, ಔರಾದ್ ಮತಕ್ಷೇತ್ರದ ಡೊಂಗರ್‌ಗಾಂವ್ ಮತ್ತು ಇತರೆ 18 ಗ್ರಾಮಗಳಲ್ಲಿ ತಲಾ 15 ಲಕ್ಷ ರೂ. ವೆಚ್ಚದಲ್ಲಿ ಡಾ:ಬಿ.ಆರ್.ಅಂಬೇಡ್ಕರ್ ಭವನ ಮತ್ತು ಧಾಬಾಕ ಮತ್ತಿತರ 5 ಗ್ರಾಮಗಳಲ್ಲಿ ತಲಾ 10 ಲಕ್ಷ ರೂ.ಗಳ ವೆಚ್ಚದಲ್ಲಿ ವಾಲ್ಮೀಕಿ ಭವನ ನಿರ್ಮಾಣ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ:	ಡೊಂಗರ್‌ಗಾಂವ್ ಮತ್ತು ಇತರೆ 18 ಗ್ರಾಮಗಳಲ್ಲಿ ಡಾ:ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ. ಧಾಬಾಕ ಮತ್ತಿತರ 5 ಗ್ರಾಮಗಳಲ್ಲಿ ವಾಲ್ಮೀಕಿ ಭವನ ನಿರ್ಮಾಣ ಮಾಡಲು ಪ್ರಸ್ತಾವನೆ ಬಂದಿರುವುದಿಲ್ಲ.
ಆ)	ಹಾಗಿದ್ದಲ್ಲಿ, ಈ ಪ್ರಸ್ತಾವನೆಗಳಿಗೆ ಯಾವ ಕಾಲಮಿತಿಯಲ್ಲಿ ಮಂಜೂರಾತಿ ನೀಡಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು;	ನಿವೇಶನ ಮತ್ತು ಅನುದಾನ ಲಭ್ಯತೆಗನುಗುಣವಾಗಿ ಮಂಜೂರಾತಿ ನೀಡಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.
ಇ)	ಇಲ್ಲದಿದ್ದಲ್ಲಿ, ಕಾರಣಗಳೇನು? (ವಿವರ ನೀಡುವುದು)	ಉದ್ಭವಿಸುವುದಿಲ್ಲ.

ಸಕಇ 623 ಪಕವಿ 2018

(ಪ್ರಿಯಾಂಕ್ ಖರ್ಗೆ)
ಸಮಾಜ ಕಲ್ಯಾಣ ಸಚಿವರು.

ಕರ್ನಾಟಕಸರ್ಕಾರ

ಸಂಖ್ಯೆ:ತೋಇ 407 ತೋಇವಿ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಸುವರ್ಣ ಸೌದ,
ಬೆಳಗಾವಿ, ದಿನಾಂಕ:20.12.2018.

152
21/12/18

ಇವರಿಂದ:

ಸರ್ಕಾರದ ಕಾರ್ಯದರ್ಶಿ,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ.

ಇವರಿಗೆ:

ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆ,
ಸುವರ್ಣಸೌದ, ಬೆಳಗಾವಿ.

ಮಾನ್ಯರೇ,

ವಿಷಯ: ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಸಿದ್ದು ಸವದಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:2269 ಕ್ಕೆ ಉತ್ತರದ ಬಗ್ಗೆ.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಸಿದ್ದು ಸವದಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2269 ಕ್ಕೆ ಉತ್ತರಗಳ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಕಳಹಿಸಿ ಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮವಿಶ್ವಾಸಿ,

ಸರ್ಕಾರದ ಅಧೀನ ಕಾರ್ಯದರ್ಶಿ(ಪರವಾಗಿ),
ತೋಟಗಾರಿಕೆ ಇಲಾಖೆ.

ಪ್ರತಿ:

1) ಮಾನ್ಯ ತೋಟಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ಸುವರ್ಣಸೌದ, ಬೆಳಗಾವಿ.
2) ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ.
3) ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ತೋಟಗಾರಿಕೆ ಇಲಾಖೆ.

ಕರ್ನಾಟಕ ವಿಧಾನಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ	:	2269
2	ಸದಸ್ಯರ ಹೆಸರು	:	ಶ್ರೀ. ಸಿದ್ದು ಸವದಿ
3	ಉತ್ತರಿಸುವ ಸಚಿವರು	:	ತೋಟಗಾರಿಕೆ ಸಚಿವರು
4	ಉತ್ತರಿಸಬೇಕಾದ ದಿನಾಂಕ	:	21.12.2018

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ತೋಟಗಾರಿಕಾ ಪ್ರದೇಶವೆಷ್ಟು; (ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿರುವ ತೋಟಗಾರಿಕೆ ವಿಸ್ತೀರ್ಣವು 20.76 ಲಕ್ಷ ಹೆಕ್ಟೇರುಗಳಿರುತ್ತದೆ. ಜಿಲ್ಲಾವಾರು ಪೂರ್ಣ ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.
ಆ)	ತೋಟಗಾರಿಕಾ ಇಲಾಖೆಯ ಕಾರ್ಯಕ್ರಮಗಳೇನು; ಪ್ರಸಕ್ತ ವರ್ಷ ಎಷ್ಟು ಗುರಿ ಹಾಕಿಕೊಳ್ಳಲಾಗಿದೆ;	ತೋಟಗಾರಿಕಾ ಇಲಾಖೆಯ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ. ಪ್ರಸಕ್ತ ವರ್ಷ ರೂ.142422.26 ಲಕ್ಷಗಳ ಗುರಿ ಹಾಕಿಕೊಳ್ಳಲಾಗಿದೆ.
ಇ)	ತೋಟಗಾರಿಕಾ ಇಲಾಖೆಯಿಂದ ರೈತರಿಗೆ ಯಾವ ರೀತಿಯ ಸೌಲಭ್ಯಗಳು ದೊರಕುತ್ತಿವೆ; ಅವುಗಳನ್ನು ಪಡೆಯಲು ಇರುವ ನಿಯಮಗಳೇನು;	ತೋಟಗಾರಿಕಾ ಇಲಾಖೆಯಿಂದ ರೈತರಿಗೆ ದೊರಕುತ್ತಿರುವ ಸೌಲಭ್ಯಗಳ ವಿವರಗಳನ್ನು ಅನುಬಂಧ-3 ರಲ್ಲಿ ನೀಡಲಾಗಿದೆ. ಅವುಗಳನ್ನು ಪಡೆಯಲು ಇರುವ ನಿಯಮಗಳ ವಿವರಗಳನ್ನು ಅನುಬಂಧ-4 ರಲ್ಲಿನೀಡಲಾಗಿದೆ.
ಈ)	ತೋಟಗಾರಿಕಾ ಬೆಳೆಗಳಿಗೆ ರೋಗಗಳ ಬಾದೆ ಬಹಳವಿದ್ದು ಯಾವ ರೀತಿ ನಿಯಂತ್ರಣ ಮಾಡಲಾಗಿದೆ;	ತೋಟಗಾರಿಕೆ ಬೆಳೆಗಳಿಗೆ ತಗಲುವ ರೋಗಗಳನ್ನು ನಿಯಂತ್ರಣ ಮಾಡಲು ಇಲಾಖೆಯಿಂದ ಈ ಕೆಳಕಂಡ ಕ್ರಮ ಕೈಗೊಳ್ಳಲಾಗಿದೆ. 1. ತೋಟಗಾರಿಕೆ ಬೆಳೆಗಳಿಗೆ ತಗಲು ರೋಗಗಳಿಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ರೈತರಿಗೆ ಸಭೆಗಳು, ತರಬೇತಿಗಳು, ಪ್ರಾತ್ಯಕ್ಷತೆಗಳು ಹಾಗೂ ಕರಪತ್ರಗಳನ್ನು ಹಂಚುವ ಮೂಲಕ ತಾಂತ್ರಿಕ ಮಾಹಿತಿ ನೀಡಲಾಗಿರುತ್ತದೆ. 2. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ ಅಡಿ ಶೇ.30 ರಂತೆ ಹಾಗೂ ತೋಟಗಾರಿಕೆ ಬೆಳೆಗಳ ಕೀಟ

		ಮತ್ತು ರೋಗಗಳ ನಿಯಂತ್ರಣ ಯೋಜನೆ ಮತ್ತು ಜಿಲ್ಲಾವಲಯ ಯೋಜನೆಯಡಿ ಶೇ50 ರಿಂದ 90 ರ ರಿಯಾಯಿತಿ ದರದಲ್ಲಿ ವಿವಿಧ ಸಸ್ಯ ಸಂರಕ್ಷಣಾ ಔಷಧಿಗಳನ್ನು ಖರೀದಿಸುವ ರೈತರಿಗೆ ಸಹಾಯಧನವನ್ನುನೀಡಲಾಗುತ್ತಿದೆ.
ಉ)	ತೋಟಗಾರಿಕಾ ಬೆಳೆಗಳಿಗೆ ಮಾರುಕಟ್ಟೆಯನ್ನು ಒದಗಿಸಲಾಗಿದೆಯೇ; ಯಾವ ಯಾವ ಬೆಳೆಗಳಿಗೆ ಬೆಂಬಲ ಬೆಲೆ ನೀಡಲಾಗಿದೆ; ಬೆಂಬಲ ಬೆಲೆ ನೀಡದಿರಲು ಕಾರಣವೇನು; (ಪೂರ್ಣ ಮಾಹಿತಿ ಒದಗಿಸುವುದು)	ಹೌದು, ಒದಗಿಸಲಾಗಿದೆ. ಕೊಬ್ಬರಿ, ತೆಂಗಿನಕಾಯಿ, ತಾಳೆಬೆಳೆ, ಟೊಮ್ಯಾಟೋ, ಅಡಿಕೆ, ಈರುಳ್ಳಿ, ಮಾವು ಹಾಗೂ ಆಲೂಗಡ್ಡೆ ಬೆಳೆಗಳಿಗೆ ಬೆಂಬಲ ಬೆಲೆ ನೀಡಲಾಗಿದೆ. ಬೆಲೆ ಕುಸಿತದ ಸಂದರ್ಭದಲ್ಲಿ ಬೆಂಬಲ ಬೆಲೆ ನೀಡಲಾಗುತ್ತಿದೆ. ತೋಟಗಾರಿಕಾ ಬೆಳೆಗಳಿಗೆ ಮಾರುಕಟ್ಟೆಯನ್ನುಒದಗಿಸಲು ಕೆಳಕಾಣಿಸಿದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. 1. ತೋಟಗಾರಿಕೆ ಇಲಾಖೆಯ ಅಂಗ ಸಂಸ್ಥೆಯಾದ ಹಾಪ್‌ಕಾಮ್ಸ್ ಸಂಸ್ಥೆಯ ಮೂಲಕ ಸದಸ್ಯ ರೈತರಿಂದ ನೇರವಾಗಿ ತೋಟಗಾರಿಕೆ ಉತ್ಪನ್ನಗಳನ್ನು ನ್ಯಾಯಯುತ ಬೆಲೆಯಲ್ಲಿ ಖರೀದಿಸಿ ಗ್ರಾಹಕರಿಗೆ ಹಾಪ್ ಕಾಮ್ಸ್ ಕೇಂದ್ರಗಳ ಮುಖಾಂತರ ಮಾರಾಟ ಮಾಡಲು ಕ್ರಮವಹಿಸಲಾಗುತ್ತಿದೆ. 2. ಮಾವು ಅಭಿವೃದ್ಧಿ ಮಂಡಳಿ, ದ್ರಾಕ್ಷರಸ ಮಂಡಳಿ, ಲಿಂಬೆ ಮಂಡಳಿ, ಮತ್ತು ಸಾಂಬಾರು ಮಂಡಳಿಗಳ ಮುಖಾಂತರ ಮೇಳಗಳು, ಸ್ಥಳೀಯ ಮಾರುಕಟ್ಟೆ ಮತ್ತು ವಿದೇಶಿ ರಫ್ತು ಮಾರುಕಟ್ಟೆ ವ್ಯವಸ್ಥೆಗೆ ಅವಕಾಶ ಕಲ್ಪಿಸಿಕೊಡಲಾಗುತ್ತಿದೆ. 3. ಕೆಪೆಕ್, ಅಪೆಡಾ, ಕರ್ನಾಟಕ ಕೃಷಿ ವ್ಯವಹಾರ ಅಭಿವೃದ್ಧಿ ಮಂಡಳಿ (ಕೆಎಬಿಡಿಸಿ), ಅಂತರಾಷ್ಟ್ರೀಯ ಪುಷ್ಪ ಹರಾಜು ಕೇಂದ್ರ (IFAB) ಮುಖಾಂತರ ರಫ್ತು ಮಾರುಕಟ್ಟೆ ವ್ಯವಸ್ಥೆಗೆ ಅವಕಾಶ ಕಲ್ಪಿಸಿಕೊಡಲಾಗುತ್ತಿದೆ. 4. ರೈತ ಉತ್ಪಾದಕ ಸಂಸ್ಥೆ (FPO)ಯ ಮೂಲಕ ರೈತ ಸದಸ್ಯರು ಬೆಳೆದ ಉತ್ಪನ್ನಗಳಿಗೆ ಮುಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ.

		5. **ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ (PPP-IHD)** ಯಡಿ ರೈತರು ಬೆಳೆಯುವ ಬೆಳೆಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸಲು ಗ್ರಾಮಮಟ್ಟದಲ್ಲಿ ರೈತರನ್ನೊಳಗೊಂಡ ಗುಂಪುಗಳನ್ನು ರಚಿಸಿ, ನೇರವಾಗಿ ರೈತರಿಂದ ಖರೀದಿಸಿ ಖಾಸಗಿ ಸಹಭಾಗಿತ್ವದಡಿ ವಿದೇಶಗಳಿಗೆ ರಫ್ತು ಮಾಡಲಾಗುತ್ತಿದೆ. 6. **ರಾಷ್ಟ್ರೀಯ ತೋಟಗಾರಿಕೆ ಮಿಷನ್** ಯೋಜನೆಯಡಿ ಮಾರುಕಟ್ಟೆಗಳ ಸ್ಥಾಪನೆಗಾಗಿ ಸಹಾಯಧನ ನೀಡಲಾಗುತ್ತಿದೆ.
ಊ)	ಶಿಥಿಲಾಗೃಹಕ್ಕೆ ನೀಡಲಾಗುವ ಸಹಾಯಧನವೆಷ್ಟು; ಯಾವ ರೀತಿ ಮತ್ತು ಎಲ್ಲೆಲ್ಲಿ ಶಿಥಿಲಾ ಗೃಹವನ್ನು ಮಾಡಬಹುದು; ರಾಜ್ಯದಲ್ಲಿರುವ ಶಿಥಿಲಾ ಗೃಹಗಳೆಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)	ಶೀಥಲ ಗೃಹ ನಿರ್ಮಾಣಕ್ಕೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ 5000 ಮೆ.ಟನ್. ಸಾಮರ್ಥ್ಯವುಳ್ಳ ಮಲ್ಟಿ ಚೇಂಬರ್ಡ ಶೀಥಲ ಗೃಹ ನಿರ್ಮಾಣಕ್ಕೆ ಶೇ. 35 ರಂತೆ ಗರಿಷ್ಟ ರೂ. 175.00ಲಕ್ಷ ಹಾಗೂ ಸಿಂಗಲ್ ಚೇಂಬರ್ಡ ಶೀಥಲ ಗೃಹನಿರ್ಮಾಣಕ್ಕೆ ಶೇ. 35 ರಂತೆ ಗರಿಷ್ಟ ರೂ. 140.00 ಲಕ್ಷಗಳವರೆಗೆ ಸಹಾಯಧನ ನೀಡಲಾಗುತ್ತಿದೆ. ಶೇಖರಣೆ ಮಾಡಬಹುದಾದ ತೋಟಗಾರಿಕೆ ಬೆಳೆಗಳಾದ ದ್ರಾಕ್ಷಿ, ಆಲೂಗಡ್ಡೆ, ಮೆಣಸಿನಕಾಯಿ ಇತ್ಯಾದಿ ಬೆಳೆಗಳನ್ನು ಹೆಚ್ಚಾಗಿ ಬೆಳೆಯುವ ತೋಟಗಾರಿಕೆ ಪ್ರದೇಶದಲ್ಲಿ ಶೀಥಲ ಗೃಹ ನಿರ್ಮಾಣ ಮಾಡುವುದು ಸೂಕ್ತವಾಗಿರುತ್ತದೆ. ರಾಜ್ಯದಲ್ಲಿ ಒಟ್ಟು 117 ಶಿಥಿಲ ಗೃಹಗಳು ಇರುತ್ತವೆ. ಜಿಲ್ಲಾವಾರು ಮಾಹಿತಿ ಈ ಕೆಳಕಂಡಂತಿದೆ.

ಕ್ರ.ಸಂ.	ಜಿಲ್ಲೆ	ಶೀತಲ ಗೃಹ	ಒಟ್ಟುಸಾಮರ್ಥ್ಯ (ಮೆ.ಟನ್)
1.	ಬೆಂಗಳೂರು ನಗರ	11	15912
2.	ಚಿಕ್ಕಬಳ್ಳಾಪುರ	3	3700
3.	ಯಾದಗಿರಿ	1	2500
4.	ಕೋಲಾರ	3	5000
5.	ಬೆಳಗಾವಿ	2	3500
6.	ಹಾಸನ	8	51300
7.	ತುಮಕೂರು	1	1500

		8.	ಧಾರವಾಡ	4	17200
		9.	ಬೆಂಗಳೂರು ಗ್ರಾಮಾಂತರ	1	10000
		10.	ರಾಯಚೂರು	6	32796
		11.	ಉತ್ತರಕನ್ನಡ	2	1775
		12.	ದಕ್ಷಿಣಕನ್ನಡ	1	25
		13.	ವಿಜಯಪುರ	14	14585
		14.	ಬೀದರ್	3	195
		15.	ರಾಮನಗರ	3	30.5
		16.	ಹಾವೇರಿ	29	87943
		17.	ಬಳ್ಳಾರಿ	12	86339
		18.	ಬಾಗಲಕೋಟೆ	2	4600
		19.	ಕಲ್ಬುರ್ಗಿ	2	9799
		20.	ಕೊಪ್ಪಳ	1	500
		21.	ಚಿಕ್ಕಮಗಳೂರು	2	1800
		22.	ಚಿತ್ರದುರ್ಗ	3	12100
		23.	ಶಿವಮೊಗ್ಗ	1	5000
		24.	ಮೈಸೂರು	1	0
		25.	ಗದಗ	1	1000
			ಒಟ್ಟು	117	369099.5

ಸಂ: ತೋಇ 407 ತೋಇವಿ 18

(ಎಂ.ಸಿ.ಮನಗೂಳಿ)

ತೋಟಗಾರಿಕೆ ಸಚಿವರು

ಅನುಬಂಧ - 1

LAQ 2269

ಕ್ರಮ ಸಂಖ್ಯೆ Sl. No.	ಜಿಲ್ಲೆಗಳು Districts	ಹೆಕ್ಟೇರುಗಳಲ್ಲಿ ವಿಸ್ತೀರ್ಣ Area
1	ಬೆಂಗಳೂರು (ನ) B'lore (U)	10272
2	ಬೆಂಗಳೂರು (ಗ್ರಾ) B'lore (R)	26640
3	ಚಿಕ್ಕಬಳ್ಳಾಪುರ Chikkaballapura	41437
4	ಚಿತ್ರದುರ್ಗ Chitradurga	148972
5	ದಾವಣಗೆರೆ Davangere	87237
6	ಕೋಲಾರ Kolar	110972
7	ರಾಮನಗರ Ramanagara	55540
8	ಶಿವಮೊಗ್ಗ Shivamogga	84184
9	ತುಮಕೂರು Tumakuru	225667
10	ಬಾಗಲಕೋಟೆ Bagalkote	55140
11	ಬೆಳಗಾವಿ Belagavi	80694
12	ವಿಜಯಾಪುರ Vijayapura	37021
13	ಧಾರವಾಡ Dharwad	85691
14	ಗದಗ Gadag	60408
15	ಹಾವೇರಿ Haveri	79677
16	ಉತ್ತರ ಕನ್ನಡ U.Kannada	40368
17	ಬಳ್ಳಾರಿ Ballari	75173
18	ಬೀದರ್ Bidar	21964
19	ಕಲಬುರಗಿ Kalaburagi	24155
20	ಕೊಪ್ಪಳ Koppal	35187
21	ರಾಯಚೂರು Raichur	16450
22	ಯಾದಗಿರಿ Yadgiri	6197
23	ಚಾಮರಾಜನಗರ Chamarajanagara	58206
24	ಚಿಕ್ಕಮಗಳೂರು Chikkamagaluru	123049
25	ದಕ್ಷಿಣ ಕನ್ನಡ D. Kannada	117684
26	ಹಾಸನ Hassan	130092
27	ಕೊಡಗು Kodagu	36215
28	ಮಂಡ್ಯ Mandya	83024
29	ಮೈಸೂರು Mysuru	63465
30	ಉಡುಪಿ Udupi	55511
ರಾಜ್ಯದ ಮೊತ್ತ *STATE TOTAL*		2076294

ತೋಟಗಾರಿಕೆ ಜಂಟಿ ನಿರ್ದೇಶಕರು (ಯೋಜನೆ)
ಲಾಲ್‌ಬಾಗ್, ಬೆಂಗಳೂರು-560 004

ಅನುಬಂಧ-2

2018-19 ನೇ ಸಾಲಿನ ತೋಟಗಾರಿಕೆ ಇಲಾಖೆಯ ನವೆಂಬರ್ -2018 ರ ಮಾಹೆಯ ಅಂತ್ಯಕ್ಕೆ ಸಾಧಿಸಲಾದ ಯೋಜನಾವಾರು ಪ್ರಗತಿ ವಿವರ

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಯೋಜನೆ	ವಾರ್ಷಿಕ ಗುರಿ
I	ಕೇಂದ್ರ ನೆರವಿನ ಯೋಜನೆಗಳು	
1	ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆ ತಾಳೆ ಅಬಿಯಾನ ಯೋಜನೆ	464.00
2	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹನಿ ನೀರಾವರಿ)	23400.00
3	ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗೆ ತೆಂಗಿನಲ್ಲಿ ಸಂಯೋಜಿತ ಬೇಸಾಯ	20000.00
4	ರಾಷ್ಟ್ರೀಯ ತೋಟಗಾರಿಕೆ ಮಿಷನ್	12802.00
5	ರಾಷ್ಟ್ರೀಯ ಆಯುಷ್ ಮಿಷನ್	200.00
	ಉಪ ಮೊತ್ತ	**56866.00**
II	ರಾಜ್ಯವಲಯ ಯೋಜನೆಗಳು	
1	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ	279.00
2	ತೋಟಗಾರಿಕೆ ನಿಗಮ ಮತ್ತು ಮಂಡಳಿಗಳಿಗೆ ಸಹಾಯಧನ	1000.00
3	ಸಮಗ್ರ ತೋಟಗಾರಿಕಾ ಅಭಿವೃದ್ಧಿ	13500.00
4	ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ	1300.00
5	ಇಲಾಖಾ ಪ್ರಯೋಗ ಶಾಲೆಗಳ ಅಭಿವೃದ್ಧಿ	659.00
6	ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ	1666.00
7	ತೋಟಗಾರಿಕೆ ಕಟ್ಟಡಗಳು	400.00
8	ಕೃಷಿ ಭಾಗ್ಯ	12917.00
9	ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ -II (ಸುಜಲಾ-III) -ಇಎಪಿ	3303.00
10	ತೋಟಗಾರಿಕೆ ಉದ್ಯಾನವನಗಳು ಮತ್ತು ತೋಟಗಳು	2000.00
11	ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ	200.00
12	ಕಾರವಾರ,ತುಮಕೂರು,ಯಾದಗಿರಿ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಇಸ್ರೇಲ್ ಮಾದರಿಯ ತೋಟಗಾರಿಕೆ ತಾಂತ್ರಿಕತೆ ಗುಚ್ಚಗಳ ಅಭಿವೃದ್ಧಿ	15000.00
13	ಸಾಬೂನು ಇಳುವರಿ ಸಸ್ಯದ ಕೃಷಿಗೆ ಬೆಂಬಲ	1000.00
14	ಕೀಟನಾಶಕ ಶೇಷ ವಿಶ್ಲೇಷಣೆ ಪ್ರಯೋಗಾಲಯ-ನಬಾಡ	50.00
15	Micro Irrigation, RIDF-XXI	448.00
16	ಬಾಗಲಕೋಟೆಯಲ್ಲಿ ತೋಟಗಾರಿಕಾ ವಿಶ್ವ ವಿದ್ಯಾಲಯ	390.00
	Infrastructure for UHS Bagalakot	761.00
	ಉಪ ಮೊತ್ತ	**54873.00**

ಕ್ರ. ಸಂ.	ಯೋಜನೆ	ವಾರ್ಷಿಕ ಗುರಿ
III	**ಜಿಲ್ಲಾವಲಯ ಯೋಜನೆಗಳು**	
1	ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆ ತಾಳೆ ಅಭಿಯಾನ ಯೋಜನೆ	60.10
2	ತೋಟಗಾರಿಕೆ ಬೆಳೆಗಳಿಗೆ ವಿಶೇಷ ಹನಿ ನೀರಾವರಿ	1161.00
3	ತೋಟಗಾರಿಕೆ ಕಟ್ಟಡಗಳು	609.00
4	ತೋಟಗಾರಿಕೆ ಕ್ಷೇತ್ರಗಳ ನಿರ್ವಹಣೆ	287.50
5	ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆಗಾಗಿ ಯೋಜನೆ	166.53
6	ಪ್ರಚಾರ ಮತ್ತು ಸಾಹಿತ್ಯ	185.77
7	ಶೀಥಲ ಗೃಹಗಳಿಗೆ ಸಹಾಯಧನ ಯೋಜನೆ	66.10
8	ಜೇನು ಸಾಕಾಣಿಕೆ	254.26
9	ರೈತರಿಗೆ ಸಹಾಯ	241.10
10	ರೈತರಿಗೆ ತರಬೇತಿ	60.90
	ಉಪ ಮೊತ್ತ	**3092.26**
IV	**ಯೋಜನೇತರ(ರಾಜ್ಯ)**	
1	ಇತರೆ ವೆಚ್ಚಗಳು	247.00
2	ನಿರ್ದೇಶನ ಮತ್ತು ಆಡಳಿತ	6576.00
3	ತೋಟಗಾರಿಕೆ ಉದ್ಯಾನಗಳ ಅಭಿವೃದ್ಧಿ	1664.00
4	ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯ	6171.00
5	ವೇತನಕ್ಕಾಗಿ ಹೆಚ್ಚುವರಿ ಅನುದಾನ -6ನೇ ವೇತನ	750.00
	ಉಪ ಮೊತ್ತ	**15408.00**
V	**ಯೋಜನೇತರ (ಜಿಲ್ಲಾ)**	
1	ಕಾರ್ಯಕಾರಿ ಸಿಬ್ಬಂದಿ	12183.00
	ಉಪ ಮೊತ್ತ	12183.00
	ಒಟ್ಟು ಮೊತ್ತ (IV+V)	27591.00
	I+II+III+IV+V ಒಟ್ಟು	142422.26

ತೋಟಗಾರಿಕೆ ಜಂಟಿ ನಿರ್ದೇಶಕರು (ಯೋಜನೆ)
ಲಾಲ್‌ಬಾಗ್, ಬೆಂಗಳೂರು-560 004

ಅನುಬಂಧ-3

ತೋಟಗಾರಿಕಾ ಇಲಾಖೆಯ ಕಾರ್ಯಕ್ರಮಗಳು ಹಾಗೂ ರೈತರಿಗೆ ಸಿಗುತ್ತಿರುವ ಸೌಲಭ್ಯಗಳ ವಿವರಗಳು

ಕ್ರ. ಸಂ	ಯೋಜನೆಗಳು	ಕಾರ್ಯಕ್ರಮದ ವಿವರ	ಸಿಗುತ್ತಿರುವ ಸವಲತ್ತುಗಳು	ಶೇಕಡಾವಾರು ಸಹಾಯಧನ	
				ಸಾಮಾನ್ಯ	ಪ.ಜಾ./ಪ.ಪಂ
I.	ಕೇಂದ್ರ ವಲಯ ಯೋಜನೆಗಳು				
1	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನಾ – ಸೂಕ್ಷ್ಮ ನೀರಾವರಿ ಯೋಜನೆ	-	ಹನಿ ನೀರಾವರಿ ಅಳವಡಿಕೆಗೆ ಗರಿಷ್ಠ 5 ಹೆಕ್ಟೇರ್ ಪ್ರದೇಶಕ್ಕೆ ಸಹಾಯಧನ ನೀಡಲಾಗುತ್ತಿದೆ. ಮೊದಲ 2 ಹೆಕ್ಟೇರ್ ಪ್ರದೇಶಕ್ಕೆ ಶೇ. 90 ರಷ್ಟು ಸಹಾಯಧನ ಮತ್ತು ನಂತರದ 3 ಹೆಕ್ಟೇರ್ ಪ್ರದೇಶಕ್ಕೆ ಭಾರತ ಸರ್ಕಾರದ ಮಾರ್ಗಸೂಚಿಯನ್ವಯ ಶೇಕಡಾವಾರು ಮಿತಿಯೊಳಗೆ ಸಹಾಯಧನ ನೀಡಲಾಗುತ್ತಿದೆ.	90	90
2	ರಾಷ್ಟ್ರೀಯ ತೋಟಗಾರಿಕೆ ಮಿಷನ್				
i.	ನರ್ಸರಿ ಸ್ಥಾಪನೆ				
	a)	ಮಾದರಿ ಸಸ್ಯಾಗಾರ (4ಹೆ) ಸಾರ್ವಜನಿಕ ವಲಯ	ಶೇ.100ರಷ್ಟು ಸಹಾಯಧನ, ಪ್ರತಿ ಹೆಕ್ಟೇರ್‌ಗೆ ರೂ.25.00ಲಕ್ಷಗಳಂತೆ, ಗರಿಷ್ಟ 4ಹೆ ವರೆಗೆ ರೂ.100.00ಲಕ್ಷ/ಘಟಕಕ್ಕೆ ಸಹಾಯಧನ ನೀಡಲಾಗುತ್ತಿದೆ.	-	-
	b)	ಖಾಸಗಿ ವಲಯ	ಶೇ.40ರಷ್ಟು ಸಹಾಯಧನ, ಪ್ರತಿ ಹೆಕ್ಟೇರ್‌ಗೆ ರೂ.10.00ಲಕ್ಷಗಳಂತೆ, ಗರಿಷ್ಟ 4ಹೆ ವರೆಗೆ ರೂ.40.00ಲಕ್ಷ/ಘಟಕಕ್ಕೆ ಸಹಾಯಧನ ನೀಡಲಾಗುತ್ತಿದೆ.	40	40

	c)	ಸಣ್ಣ ಸಸ್ಯಾಗಾರ (4ಹೆ) ಸಾರ್ವಜನಿಕ ವಲಯ	ಶೇ.100ರಷ್ಟು ಸಹಾಯಧನ, ಪ್ರತಿ ಹೆಕ್ಟೇರ್‌ಗೆ ರೂ.15.00 ಲಕ್ಷಗಳು.	-	-
	d)	ಖಾಸಗಿ ವಲಯ	ಶೇ.50ರಷ್ಟು ಸಹಾಯಧನ, ಪ್ರತಿ ಹೆಕ್ಟೇರ್‌ಗೆ ರೂ.7.50 ಲಕ್ಷಗಳು.	50	50
ii.	**ನರ್ಸರಿಗಳ ಉನ್ನತೀಕರಣ**				
	a)	ಸಾರ್ವಜನಿಕ ವಲಯ	ಶೇ.100ರಷ್ಟು ಸಹಾಯಧನ, ಗರಿಷ್ಟ 4ಹೆ ವರೆಗೆ ರೂ.10.00ಲಕ್ಷ/ಘಟಕಕ್ಕೆ ಸಹಾಯಧನ ನೀಡಲಾಗುತ್ತಿದೆ.	-	-
	b)	ನರ್ಸರಿಗಳ ಉನ್ನತೀಕರಣ-ಖಾಸಗಿ ವಲಯ	ಶೇ.50ರಷ್ಟು ಸಹಾಯಧನ, ಗರಿಷ್ಟ 4ಹೆ ವರೆಗೆ ರೂ.5.00ಲಕ್ಷ/ಘಟಕಕ್ಕೆ ಸಹಾಯಧನ ನೀಡಲಾಗುತ್ತಿದೆ.	50	50
iii.	**ಅಂಗಾಂಶ ಕೃಷಿ ಘಟಕಗಳ ಬಲವರ್ಧನೆ**				
	a)	ಸಾರ್ವಜನಿಕ ವಲಯ	ಶೇ.100ರಂತೆ ಪ್ರತಿ ಘಟಕಕ್ಕೆ ಗರಿಷ್ಠ ರೂ.20.00ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ.	-	-
	b)	ಖಾಸಗಿ ವಲಯ	ಶೇ.50ರಂತೆ ಪ್ರತಿ ಘಟಕಕ್ಕೆ ಗರಿಷ್ಠ ರೂ.10.00ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ.	50	50
iv.	**ಹೊಸ ಅಂಗಾಂಶ ಕೃಷಿ ಘಟಕಗಳ ಸ್ಥಾಪನೆ**				
	a)	ಸಾರ್ವಜನಿಕ ವಲಯ	ಶೇ.100ರಂತೆ ಪ್ರತಿ ಘಟಕಕ್ಕೆ ಗರಿಷ್ಠ ರೂ.250.00 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ.	-	-
	b)	ಖಾಸಗಿ ವಲಯ	ಶೇ.40ರಂತೆ ಪ್ರತಿ ಘಟಕಕ್ಕೆ ಗರಿಷ್ಠ ರೂ.100.00ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ.	40	40
v.	**ತರಕಾರಿ ಬೀಜೋತ್ಪಾದನೆ**				

	a)	ಮುಕ್ತ ಪರಾಗಸ್ಪರ್ಶ ಬೆಳೆಗಳು ಸಾರ್ವಜನಿಕ ವಲಯ	ಸಾರ್ವಜನಿಕ ವಲಯಕ್ಕೆ ಶೇ.100 ರಷ್ಟು ಪ್ರತಿ ಹೆಕ್ಟೇರ್‌ಗೆ ರೂ. 35,000/- ಗರಿಷ್ಟ 5ಹೆಕ್ಟೇರ್ ವರೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).	100	-
		ಮುಕ್ತ ಪರಾಗಸ್ಪರ್ಶ ಬೆಳೆಗಳು (ಖಾಸಗಿ ವಲಯ)	ಖಾಸಗಿ ವಲಯಕ್ಕೆ ಶೇ.35ರಷ್ಟು ಪ್ರತಿ ಹೆಕ್ಟೇರ್‌ಗೆ ರೂ.12,250ರಂತೆಗರಿಷ್ಟ 5 ಹೆಕ್ಟೇರ್ ವರೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).	35	90
	b)	ಹೈಬ್ರಿಡ್ ಬೀಜಗಳು (ಸಾರ್ವಜನಿಕ ವಲಯ)	ಸಾರ್ವಜನಿಕ ವಲಯಕ್ಕೆ ಶೇ.100 ರಷ್ಟು ಪ್ರತಿ ಹೆಕ್ಟೇರ್‌ಗೆ ರೂ. 1.50 ಲಕ್ಷಗಳಂತೆ ಗರಿಷ್ಟ 5 ಹೆಕ್ಟೇರ್‌ವರೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).	100	-
		ಹೈಬ್ರಿಡ್ ಬೀಜಗಳು(ಖಾಸಗಿ ವಲಯ)	ಪ್ರತಿ ಹೆಕ್ಟೇರ್‌ಗೆ ರೂ.0.525 ಲಕ್ಷಗಳಂತೆ ಗರಿಷ್ಟ 5 ಹೆಕ್ಟೇರ್ ವರೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).	35	90
vi.	**ಪ್ರದೇಶ ವಿಸ್ತರಣೆ**		ತೋಟಗಾರಿಕೆ ಬೆಳೆಗಳಾದ ಹಣ್ಣು, ತೋಟದ ಬೆಳೆಗಳ ಪ್ರದೇಶ ವಿಸ್ತರಣೆಗೆ ಪ್ರತಿ ಫಲಾನುಭವಿಗೆ 4 ಹೆಕ್ಟೇರ್ ಹಾಗೂ ಹೈಬ್ರೀಡ್ ತರಕಾರಿಗಳು ಹಾಗೂ ಹೂವಿನ ಬೆಳೆಗಳಿಗೆ 2 ಹೆಕ್ಟೇರ್‌ವರೆಗೆ ಮಿತಿಗೊಳಿಸಿ ಶೇ. 40 ರಿಂದ 90 ರಷ್ಟು ಸಹಾಯಧನ	40	90

			ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).		
Vii.	ತೋಟಗಾರಿಕಾ ಬೆಳೆಗಳ ಪುನಶ್ಚೇತನ		ತೋಟಗಾರಿಕಾ ಬೆಳೆಗಳ ಪುನಶ್ಚೇತನ ಕಾರ್ಯಕ್ರಮಕ್ಕೆ ಸಹಾಯಧನವನ್ನು ಗರಿಷ್ಠ ರೂ.0.20ಲಕ್ಷಗಳು/ ಹೆಕ್ಟೇರ್‌ನಂತೆ ಪ್ರತಿ ರೈತರಿಗೆ ಗರಿಷ್ಠ 2 ಹೆಕ್ಟೇರ್ ಪ್ರದೇಶಕ್ಕೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).	50	90
viii.	ನೀರು ಸಂಗ್ರಹಣಾ ಘಟಕ				
	a)	ವೈಯಕ್ತಿಕ ಕೃಷಿ ಹೊಂಡ (20ಮೀ*20ಮೀ*3ಮೀ)	ವೈಯಕ್ತಿಕ ಕೃಷಿ ಹೊಂಡ ನಿರ್ಮಾಣಕ್ಕೆ ಸಹಾಯಧನವನ್ನು ಗರಿಷ್ಠ ರೂ.0.75 ಲಕ್ಷಗಳು/ಪ್ರತಿ ಘಟಕದಂತೆ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).	50	90
	b)	ಸಮುದಾಯ ಕೆರೆ	ಸಮುದಾಯ ಕೆರೆ ನಿರ್ಮಾಣಕ್ಕೆ ಶೇ.100ರ ವರದಲ್ಲಿ ಸಹಾಯಧನವನ್ನು ಗರಿಷ್ಠ ರೂ.4.00ಲಕ್ಷಗಳು/ಪ್ರತಿ ಘಟಕದಂತೆ ನೀಡಲಾಗುತ್ತಿದೆ.	100	100
ix.	ಸಂರಕ್ಷಿತ ಬೇಸಾಯ				
	a)	ಪಾಲಿ ಹೌಸ್ ನಿರ್ಮಾಣ	ಪ್ರತಿ ಫಲಾನುಭವಿಗೆ ರೂ.772.00 ರಿಂದ ರೂ.1069/ಚದರ ಮೀಟರ್ ನಂತೆ ಗರಿಷ್ಠ 4000 ಚದರ ಮೀಟರ್ ವರೆಗೆ ಸಹಾಯಧನ	50	90

			ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).		
	b)	ನೆರಳು ಪರದೆ ನಿರ್ಮಾಣ	ಪ್ರತಿ ಫಲಾನುಭವಿಗೆ ರೂ.384ಚದರ ಮೀಟರ್ ರಂತೆ ಗರಿಷ್ಠ 4000 ಚದರ ಮೀಟರ್ ವರೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).	50	90
	c)	ಪಕ್ಷಿ ನಿರೋಧಕ ಬಲೆ	ಪ್ರತಿ ಫಲಾನುಭವಿಗೆ ರೂ.10/- ಚದರ ಮೀಟರ್ ರಂತೆ ಗರಿಷ್ಠ 5000 ಚದರ ಮೀಟರ್ ವರೆಗೆ ರೂ.0.50 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).	50	90
	d)	ತರಕಾರಿ ಬೆಳೆಯಲ್ಲಿ ಪ್ಲಾಸ್ಟಿಕ್ ಹೊದಿಕೆ.	ಪ್ಲಾಸ್ಟಿಕ್ ಹೊದಿಕೆಗೆ ಸಹಾಯಧನವನ್ನು ಗರಿಷ್ಠ ರೂ.0.16ಲಕ್ಷಗಳು/ಹೆಕ್ಟೇರ್ ನಂತೆ, ಪ್ರತಿ ರೈತರಿಗೆ ಗರಿಷ್ಠ 2 ಹೆಕ್ಟೇರ್ ಪ್ರದೇಶಕ್ಕೆ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).	50	90
x.	**ಸಮಗ್ರ ಕೀಟ/ರೋಗ ನಿಯಂತ್ರಣ ಮತ್ತು ಸಮಗ್ರ ಪೋಷಕಾಂಶ ನಿರ್ವಹಣೆ**		ಪ್ರತಿ ಫಲಾನುಭವಿಗೆ ರೂ.1200/ ಹೆಕ್ಟೇರ್‌ನಂತೆ ಗರಿಷ್ಠ 4ಹೆ ವರೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).	30	90

xi.	ಜೇನು ಕೃಷಿ				
	a)	ಜೇನು ಪೆಟ್ಟಿಗೆ ಹಾಗೂ ಕುಟುಂಬ	ಪ್ರತಿ ಜೇನು ಪೆಟ್ಟಿಗೆ ಹಾಗೂ ಕುಟುಂಬದ ಪ್ಯಾಕೇಜ್‌ಗೆ ರೂ.1600/-ರಂತೆ, ಗರಿಷ್ಟ 50 ಕುಟುಂಬ/ಪೆಟ್ಟಿಗೆಗೆ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).	40	90
	b)	ಜೇನುತುಪ್ಪ ತೆಗೆಯುವ ಯಂತ್ರ	ಒಂದು ಘಟಕಕ್ಕೆ ರೂ.8000/-ರಂತೆ ಸಹಾಯಧನ ನೀಡಲಾಗುತ್ತಿದೆ.	40	40
xii.	ತೋಟಗಾರಿಕೆಯಲ್ಲಿಯಾಂತ್ರೀಕರಣ				
	a)	ಟ್ರ್ಯಾಕ್ಟರ್ (20ಹೆಚ್.ಪಿ.ವರೆಗೆ)	ಸಾಮಾನ್ಯ ರೈತರಿಗೆ ಗರಿಷ್ಠ ರೂ.0.75ಲಕ್ಷಗಳು ಮತ್ತು ಪರಿಶಿಷ್ಠ ಜಾತಿ/ಪಂಗಡ/ಸಣ್ಣ/ಅತಿ ಸಣ್ಣ/ಮಹಿಳೆಯರಿಗೆ ಗರಿಷ್ಠ ರೂ.2.70 ಲಕ್ಷಗಳ ಸಹಾಯಧನವನ್ನು ಪ್ರತಿ ಘಟಕಕ್ಕೆ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).	25	90
	b)	ಪವರ್ ಟಿಲ್ಲರ್ (8ಹೆಚ್.ಪಿ.ಗಿಂತ ಕಡಿಮೆ)	ಸಾಮಾನ್ಯ ರೈತರಿಗೆ ಗರಿಷ್ಠ ರೂ.0.40ಲಕ್ಷಗಳು ಮತ್ತು ಪರಿಶಿಷ್ಠ ಜಾತಿ/ಪಂಗಡ/ಸಣ್ಣ/ಅತಿ ಸಣ್ಣ/ಮಹಿಳೆಯರಿಗೆ ಗರಿಷ್ಠ ರೂ.0.90ಲಕ್ಷಗಳ ಸಹಾಯಧನವನ್ನು ಪ್ರತಿ ಘಟಕಕ್ಕೆ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).	40	90

	c)	ಪವರ್ ಟಿಲ್ಲರ್ (8ಹೆಚ್.ಪಿ. ಮತ್ತು ಅಧಿಕ)	ಸಾಮಾನ್ಯ ರೈತರಿಗೆ ಗರಿಷ್ಠ ರೂ.0.60ಲಕ್ಷಗಳು ಮತ್ತು ಪರಿಶಿಷ್ಠ ಜಾತಿ/ಪಂಗಡ/ಸಣ್ಣ/ಅತಿಸಣ್ಣ/ಮಹಿಳೆಯರಿಗೆ ಗರಿಷ್ಠ ರೂ.1.35ಲಕ್ಷಗಳ ಸಹಾಯಧನವನ್ನು ಪ್ರತಿ ಘಟಕಕ್ಕೆ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).	40	90
	d)	ಸ್ವಯಂ ಚಾಲಿತ ಯಂತ್ರಗಳು	ಸಾಮಾನ್ಯ ರೈತರಿಗೆ ಗರಿಷ್ಠ ರೂ.1.00ಲಕ್ಷಗಳು ಮತ್ತು ಪರಿಶಿಷ್ಠ ಜಾತಿ/ಪಂಗಡ/ಸಣ್ಣ/ಅತಿಸಣ್ಣ/ಮಹಿಳೆಯರಿಗೆ ಗರಿಷ್ಠ ರೂ.2.25ಲಕ್ಷಗಳ ಸಹಾಯಧನವನ್ನು ಪ್ರತಿ ಘಟಕಕ್ಕೆ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).	40	90
xiv.	**ಮಾನವ ಸಂಪನ್ಮೂಲ ಅಭಿವೃದ್ಧಿ**				
	a)	ರೈತರಿಗೆ ತರಬೇತಿ	ರೈತರಿಗೆ ಒಳ ರಾಜ್ಯದಲ್ಲಿ ರೂ.1000/- ಮತ್ತು ಹೊರ ರಾಜ್ಯದಲ್ಲಿ ರೂ.1500/- ಪ್ರತಿ ದಿನಕ್ಕೆ ವೆಚ್ಚ ಭರಿಸಲಾಗುತ್ತಿದೆ.	100	100
xv.	**ಸಮಗ್ರ ಕೊಯ್ಲೋತ್ತರ ನಿರ್ವಹಣೆ**				
	a)	ಪ್ಯಾಕ್‌ಹೌಸ್.	ನಿಗದಿತ ವಿನ್ಯಾಸದಲ್ಲಿ ನಿರ್ಮಿಸಿದ ಕನಿಷ್ಠ ಕಡ್ಡಾಯ ಸೌಕರ್ಯಗಳನ್ನು ಹೊಂದಿರುವ 216ಘ.ಮೀ. ಅಳತೆಯ (9ಮಿ*6ಮಿ*4ಮಿ) ಪ್ಯಾಕ್‌ಹೌಸ್‌ನ ಘಟಕ ವೆಚ್ಚ ರೂ.4.00 ಲಕ್ಷಗಳಾಗಿದ್ದು, ಗರಿಷ್ಟ ರೂ.2.00 ಲಕ್ಷಗಳ ಸಹಾಯಧನ	50	90

10

			ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).		
	b)	ಸಮಗ್ರ ಪ್ಯಾಕ್‌ಹೌಸ್	ನಿಗದಿತ ವಿನ್ಯಾಸದಲ್ಲಿ ನಿರ್ಮಿಸಿದ ಕನಿಷ್ಠ ಕಡ್ಡಾಯ ಸೌಕರ್ಯಗಳನ್ನು ಹೊಂದಿರುವ 648ಘ.ಮೀ. ಅಳತೆಯ (9ಮಿ*18ಮಿ*4ಮಿ) ಪ್ಯಾಕ್‌ಹೌಸ್‌ನ ಘಟಕ ವೆಚ್ಚ ರೂ.50.00 ಲಕ್ಷಗಳಾಗಿದ್ದು, ಗರಿಷ್ಟ ರೂ.17.50 ಲಕ್ಷಗಳ ಸಹಾಯಧನವನ್ನು ಪ್ರತಿ ಘಟಕಕ್ಕೆ ನೀಡಲಾಗುತ್ತಿದೆ.	35	35
	c)	ಶೀತಲ ಗೃಹ ನಿರ್ಮಾಣ	ಪ್ರತಿ ಮೆಟ್ರಿಕ್ ಟನ್‌ಗೆ ರೂ.2800.00ರಂತೆ ಗರಿಷ್ಠ 5000 ಮೆಟ್ರಿಕ್ ಟನ್‌ವರೆಗೆ ಸಹಾಯಧನ ನೀಡಲಾಗುತ್ತಿದೆ. (Credit Linked Backended Subsidy)	35	35
	d)	ಶೀತಲ ವಾಹನ ಖರೀದಿ	ಪ್ರತಿ ಘಟಕಕ್ಕೆ ಗರಿಷ್ಠ ರೂ.9.10ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ.(Credit Linked Backended Subsidy)	35	35
	e)	ಪ್ರಾಥಮಿಕ ಸಂಸ್ಕರಣೆ ಘಟಕಗಳು	ಪ್ರಾಥಮಿಕ ಸಂಸ್ಕರಣೆ ಘಟಕವನ್ನು ಸ್ಥಾಪಿಸಲು ಪ್ರತಿ ಘಟಕ ವೆಚ್ಚ ರೂ 25.00ಲಕ್ಷಗಳಾಗಿದ್ದು, Credit Linked Backended Subsidy ರೂಪದಲ್ಲಿ ಪ್ರತಿ ಘಟಕಕ್ಕೆ Project cost ಮೊತ್ತಕ್ಕೆ ಮಾರ್ಗಸೂಚಿಯನ್ವಯ ಶೇ. 40 ರಷ್ಟು ಗರಿಷ್ಠ ರೂ. 10.00ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).	40	90
	f)	ಹಣ್ಣು ಮಾಗಿಸುವ ಘಟಕ	ಪ್ರತಿ ಮೆಟ್ರಿಕ್ ಟನ್‌ಗೆ ರೂ.35,000.00ರಂತೆ ಗರಿಷ್ಠ 300 ಮೆಟ್ರಿಕ್ ಟನ್‌ವರೆಗೆ ಸಹಾಯಧನ ನೀಡಲಾಗುತ್ತಿದೆ.	35	35

			(Credit Linked Backended Subsidy)		
	g)	ಕಡಿಮೆ ವೆಚ್ಚದ ಈರುಳ್ಳಿ ಶೇಖರಣಾ ಘಟಕ (25ಮೆ.ಟನ್)	ಪ್ರತಿ ಘಟಕಕ್ಕೆ ಗರಿಷ್ಠ ರೂ.0.875 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).	50	90
	h)	Cold Staorage Staging	Cold Staorage Staging ಸ್ಥಾಪಿಸಲು ಘಟಕ ವೆಚ್ಚ ರೂ 15.00ಲಕ್ಷಗಳಾಗಿದ್ದು, Credit Linked Backended Subsidy ರೂಪದಲ್ಲಿ ಪ್ರತಿ ಘಟಕಕ್ಕೆ Project cost ಮೊತ್ತಕ್ಕೆ ಮಾರ್ಗಸೂಚಿಯನ್ವಯ ಶೇ. 35 ರಷ್ಟು ಗರಿಷ್ಠ ರೂ. 5.25 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).	35	35
	i)	ಸರ್ಕಾರಿ ಅಥವಾ ಖಾಸಗಿ ಅಥವಾ ಸಹಕಾರಿ ಸಂಘಗಳ ಜಾಗದಲ್ಲಿ ತೋಟಗಾರಿಕಾ ಉತ್ಪಾದನೆಗೆ ಮಾರುಕಟ್ಟೆ ಮೂಲಸೌಕರ್ಯಗಳನ್ನು ಸ್ಥಾಪಿಸುವುದು			

		ಅ) Terminal Markets	ಸರ್ಕಾರಿ ಅಥವಾ ಖಾಸಗಿ ಅಥವಾ ಸಹಕಾರಿ ಸಂಘಗಳ ಜಾಗದಲ್ಲಿ ತೋಟಗಾರಿಕಾ ಉತ್ಪಾದನೆಗೆ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ Terminal Markets ಸ್ಥಾಪಿಸಲು ಶೇ.25-40 ರಷ್ಟು ಸಹಾಯಧನ ನೀಡಲಾಗುತ್ತಿದೆ. ಘಟಕ ವೆಚ್ಚ ರೂ 150.00 ಕೋಟಿಗಳಾಗಿರುತ್ತದೆ.	25-40	
		ಆ) ಸಗಟು ಮಾರುಕಟ್ಟೆ (Whole sale Market)	ಘಟಕ ವೆಚ್ಚ ರೂ 100.00 ಕೋಟಿಗಳಾಗಿರುತ್ತದೆ. ಸರ್ಕಾರಿ ಅಥವಾ ಖಾಸಗಿ ಅಥವಾ ಸಹಕಾರಿ ಸಂಘಗಳ ಜಾಗದಲ್ಲಿ ತೋಟಗಾರಿಕಾ ಉತ್ಪಾದನೆಗೆ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಸಗಟು ಮಾರುಕಟ್ಟೆ ಸ್ಥಾಪಿಸಲು ಬಂಡವಾಳ ವೆಚ್ಚವನ್ನಾಗಿ ಶೇ.25 ರಷ್ಟು ಸಾಮಾನ್ಯ ಪ್ರದೇಶಗಳಿಗೆ ಹಾಗೂ ಶೇ.33.33 ರಷ್ಟು ಬಂಡವಾಳ ವೆಚ್ಚವನ್ನಾಗಿ ನಿಗದಿತ ಮತ್ತು ಗುಡ್ಡಗಾಡು ಪ್ರದೇಶಗಳಿಗೆ ನೀಡಲಾಗುತ್ತಿದೆ.	25-40	
	j)	Solar Dehydration Unit	ಘಟಕ ವೆಚ್ಚ ಗರಿಷ್ಠ ರೂ.4.00 ಲಕ್ಷಗಳಾಗಿದ್ದು ಶೇ.50 ರಂತೆ ಪ್ರತಿ ಫಲಾನುಭವಿಗೆ ರೂ. 2.00 ಲಕ್ಷ ಸಹಾಯಧನ ನೀಡಲಾಗುತ್ತಿದೆ	50	50
3	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ				
	i	ತೋಟಗಾರಿಕೆ ಬೆಳೆಗಳ ನಿಖರ ಬೇಸಾಯ	ಸದರಿ ಯೋಜನೆಯಡಿ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ರೈತರಿಗೆಸಹಾಯಧನವನ್ನು ಗರಿಷ್ಠ 5 ಎಕರೆವರೆಗೆ	-	90

			ನೀಡಲಾಗುತ್ತಿದೆ. (ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ).		
	ii	ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆ	ಪೂರ್ಣ ಪ್ರಮಾಣದ ಸಂಸ್ಕರಣೆ ಮತ್ತು ಮೌಲ್ಯವರ್ಧಿತ ಘಟಕಗಳ ಒಟ್ಟು ಯೋಜನಾ ವೆಚ್ಚದ ಶೇ.25 ರಂತೆ ಗರಿಷ್ಟ ರೂ.50.00 ಲಕ್ಷಗಳಿಗೆ ಮಿತಿಗೊಳಿಸಿ ಸಹಾಯಧನ ನೀಡಲಾಗುತ್ತಿದೆ. ಆದರೆ ಸಂಸ್ಕರಣಾ ಘಟಕಗಳ ಯೋಜನಾ ವೆಚ್ಚ ಕನಿಷ್ಟ ರೂ.50.00 ಲಕ್ಷಗಳಾಗಿರತಕ್ಕದ್ದು.	50	90
	iii	ತೋಟಗಾರಿಕೆಯಲ್ಲಿ ಕೋಯ್ಲೋತ್ತರ ನಿರ್ವಹಣೆ ಚಟುವಟಿಕೆಗಳಿಗೆ ಪ್ರೋತ್ಸಾಹ ಕಾರ್ಯಕ್ರಮ.			
		ಅ) ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಘಟಕ	ಕನಿಷ್ಠ ಘಟಕ ವೆಚ್ಚ ರೂ 50.00 ಲಕ್ಷದಿಂದ ಗರಿಷ್ಠ ರೂ.200.00 ಲಕ್ಷಗಳನ್ನು ನಿಗಧಿಪಡಿಸಲಾಗಿದೆ. (Credit Linked Backended Subsidy @ Maximum Cost of Rs.50.00 Lakh/unit)	25	-
		ಆ) ಪ್ರಾಥಮಿಕ ಸಂಸ್ಕರಣಾ ಘಟಕ	ಪ್ರಾಥಮಿಕ ಸಂಸ್ಕರಣಾ ಘಟಕ ಸ್ಥಾಪಿಸಲು ಘಟಕ ವೆಚ್ಚ ಗರಿಷ್ಠ ರೂ.25.00 ಲಕ್ಷಗಳನ್ನು ನಿಗಧಿಪಡಿಸಲಾಗಿದೆ. Credit Linked Backended Subsidy,40% of Capital)	40	90

/ 4

		ಇ)ಪ್ಯಾಕ್ ಹೌಸ್ (9ಮೀ*6ಮೀ)	ಪ್ಯಾಕ್ ಹೌಸ್ ಸ್ಥಾಪಿಸಲು ಘಟಕ ವೆಚ್ಚ ಗರಿಷ್ಠ ರೂ.4.00 ಲಕ್ಷಗಳನ್ನು ನಿಗಧಿಪಡಿಸಲಾಗಿದೆ.	50	90
	iv)	ನೀರಿನ ಟ್ಯಾಂಕರ್ ಖರೀದಿಗೆ ಸಹಾಯಧನ	ನೀರಿನ ಟ್ಯಾಂಕರ್ ಖರೀದಿಗೆ ಸಹಾಯಧನ ಕಾರ್ಯಕ್ರಮದಡಿ ಪ್ರತೀ 4000 ಲೀ ಸಾಮರ್ಥ್ಯದ ಘಟಕಕ್ಕೆ 1.25 ಲಕ್ಷ ರೂಗಳನ್ನು ಹಾಗೂ ಪ್ರತೀ 5000 ಲೀ ಸಾಮರ್ಥ್ಯದ ಘಟಕಕ್ಕೆ 1.40 ಲಕ್ಷ ರೂಗಳನ್ನು, ನಿಗಧಿಪಡಿಸಲಾಗಿದೆ.(ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆಯ ಹೊಂದಾಣಿಕೆ ಮೊತ್ತವನ್ನು ಒಳಗೊಂಡಿದೆ)	50	90
4	ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತ ಬೇಸಾಯ	a) ತೆಂಗಿನ ತೋಟಗಳ ಪುನಃಶ್ಚೇತನ ಹಾಗೂ ಮರುನಾಟಿ ಮತ್ತು ನಿರ್ವಹಣೆ	ತೆಂಗಿನ ತೋಟಗಳ ಪುನಃಶ್ಚೇತನ ಹಾಗೂ ಮರುನಾಟಿ ಮತ್ತು ನಿರ್ವಹಣೆಗಾಗಿ ಒಂದು ಹೆಕ್ಟೇರ್ ಪ್ರದೇಶಕ್ಕೆ ತಗಲುವ ಘಟಕ ವೆಚ್ಚ ರೂ.1,10,000/- ಗಳಲ್ಲಿ ಪ್ರತಿ ಫಲಾನುಭವಿಗೆ ಕನಿಷ್ಠ 0.4 ಹೆಕ್ಟೇರ್ ನಿಂದ ಗರಿಷ್ಠ 1 ಹೆಕ್ಟೇರ್ ವರೆಗೆ ಮಿತಿಗೊಳಿಸಿ, ಪ್ರತಿ ಹೆಕ್ಟೇರ್ ಗೆ ರೂ.44,750/- ಗಳನ್ನು ಮೊದಲನೇ ವರ್ಷ ಹಾಗೂ ರೂ.8,750/- ಗಳನ್ನು ಎರಡನೇ ವರ್ಷದ ನಿರ್ವಹಣೆಗೆ ನೀಡಲಾಗುತ್ತಿದೆ.	100	100
		b) ಹೊಸ ಪ್ರಾತ್ಯಕ್ಷತೆ ತಾಕುಗಳ ನಿರ್ಮಾಣ	ಹೊಸ ಪ್ರಾತ್ಯಕ್ಷತೆ ತಾಕುಗಳ ನಿರ್ಮಾಣ ಮತ್ತು ನಿರ್ವಹಣೆಗಾಗಿ ಒಂದು ಹೆಕ್ಟೇರ್ ಪ್ರದೇಶಕ್ಕೆ ತಗಲುವ ಘಟಕ ವೆಚ್ಚ ರೂ.35,000/- ಗಳನ್ನು ಪ್ರತೀ ವರ್ಷಕ್ಕೆ ರೂ,17,500/- ಗಳ ಸಹಾಯಧನವನ್ನು ಎರಡು ವಾರ್ಷಿಕ ಕಂತುಗಳಲ್ಲಿ ನೀಡುವುದು. ಪ್ರತಿ ಫಲಾನುಭವಿಗೆ ಕನಿಷ್ಠ 0.5 ಹೆಕ್ಟೇರ್ ನಿಂದ ಗರಿಷ್ಠ 1 ಹೆಕ್ಟೇರ್ ವರೆಗೆ ಮಿತಿಗೊಳಿಸಿ ಸಹಾಯಧನವನ್ನು ನೀಡಲಾಗುತ್ತಿದೆ.		
5	ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್				

	a)	ಮಾದರಿ ಸಸ್ಯಾಗಾರ(4ಹೆ)- ಸಾರ್ವಜನಿಕ ವಲಯ	ಶೇ.100 ರಷ್ಟು ಸಹಾಯಧನ, ಪ್ರತಿ ಘಟಕಕ್ಕೆ ಗರಿಷ್ಟ ರೂ.25.00 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ.	100	100
	b)	ಖಾಸಗಿ ವಲಯ	ಶೇ.50ರಷ್ಟು ಸಹಾಯಧನ, ಪ್ರತಿ ಘಟಕಕ್ಕೆ ಗರಿಷ್ಟ ರೂ.12.50 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ .	–	–
ಸಣ್ಣ ನರ್ಸರಿಗಳಿಗೆ ಸಹಾಯದನ (1 ಹೆಕ್ಟೇರ್)					
	a)	ಸಣ್ಣ ಸಸ್ಯಾಗಾರ (1 ಹೆ)- ಸಾರ್ವಜನಿಕ ವಲಯ	ಶೇ.100 ರಷ್ಟು ಸಹಾಯಧನ, ಪ್ರತಿ ಘಟಕಕ್ಕೆ ಗರಿಷ್ಟ ರೂ.6.25 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ.	–	–
	b)	ಖಾಸಗಿ ವಲಯ	ಶೇ.50ರಷ್ಟು ಸಹಾಯಧನ, ಪ್ರತಿ ಘಟಕಕ್ಕೆ ಗರಿಷ್ಟ ರೂ.3.125 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ.	–	–
	ಚ)	ಔಷಧಿ ಬೆಳೆಗಳ ಪ್ರದೇಶ ವಿಸ್ತರಣೆ	ಔಷಧಿ ಬೆಳೆಗಳಾದ ಅಶ್ವಗಂಧ, ತುಳಸಿ, ಅಲೋ ವೆರಾ, ಹಿಪ್ಪಲಿ, ಮುಕೂನ, ಕೋಕಂ ವಿಸ್ತರಣೆಗೆ ಶೇ.30 ರಷ್ಟು ಸಹಾಯಧನ ನೀಡಲಾಗುತ್ತಿದೆ. ಪ್ರತಿ ಫಲಾನುಭವಿಗೆ 1 ಅಥವಾ ಅದಕ್ಕಿಂತ ಹೆಚ್ಚು ಬೆಳೆಗಳನ್ನು ಒಳಗೊಂಡಂತೆ ಗರಿಷ್ಟ 10 ಹೆಕ್ಕರೆ ವರೆಗೆ ಸಹಾಯಧನ ನೀಡಲಾಗುತ್ತಿದೆ.	30	30
			ಔಷಧಿ ಬೆಳೆಯಾದ ಅಶೋಕ ವಿಸ್ತರಣೆಗೆ ಶೇ.50 ರಷ್ಟು ಸಹಾಯಧನ ನೀಡಲಾಗುತ್ತಿದೆ. ಪ್ರತಿ ಫಲಾನುಭವಿಗೆ 1 ಅಥವಾ ಅದಕ್ಕಿಂತ ಹೆಚ್ಚು ಬೆಳೆಗಳನ್ನು ಒಳಗೊಂಡಂತೆ ಗರಿಷ್ಟ 10 ಹೆಕ್ಕರೆ ವರೆಗೆ ಸಹಾಯಧನ ನೀಡಲಾಗುತ್ತಿದೆ.	–	–

16

			ಔಷಧಿ ಬೆಳೆಗಳಾದ ರಕ್ತ ಚಂದನ, ಶ್ರೀಗಂಧ, ಅಗರ್ ವುಡ್ ಬೆಳೆಗಳ ಪ್ರದೇಶ ವಿಸ್ತರಣೆಗೆ ಶೇ.75 ರಷ್ಟು ಸಹಾಯಧನ ನೀಡಲಾಗುತ್ತಿದೆ. ಪ್ರತಿ ಫಲಾನುಭವಿಗೆ 1 ಅಥವಾ ಅದಕ್ಕಿಂತ ಹೆಚ್ಚು ಬೆಳೆಗಳನ್ನು ಒಳಗೊಂಡಂತೆ ಗರಿಷ್ಟ 10 ಹೆಕ್ಕರೆ ವರೆಗೆ ಸಹಾಯಧನ ನೀಡಲಾಗುತ್ತಿದೆ.	75	75
	d)	ಒಣಗಿಸುವ ಶೆಡ್/ ಸಂಗ್ರಹಣಾ ಗೋಧಾಮು/ ಮಾರುಕಟ್ಟೆ ಮೂಲಭೂತ ಸೌಲಭ್ಯ ನಿರ್ಮಾಣ	ಯೋಜನಾ ವೆಚ್ಚದ ಶೇ.50 ರಷ್ಟು ಸಹಾಯಧನ	50	50
	e)	ಸಾವಯವ ಕೃಷಿ ಮತ್ತು ಗುಂಪು ದೃಢೀಕರಣ	ಶೇ.50 ರಂತೆ ರೂ.10,000 ಪ್ರತೀ ಹೆಕ್ಟೇರ್ ಗೆ 3 ಕಂತುಗಳಲ್ಲಿ ಗರಿಷ್ಟ 4 ಹೆಕ್ಟೇರ್ ಗಳವರೆಗೆ. ಹಾಗೂ ಗುಂಪು ದೃಢೀಕರಣ ರೂ.5.00 ಲಕ್ಷ 50 ಹೆಕ್ಟೇರ್ ಗೆ	–	–
6	**ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆತಾಳೆ ಅಭಿಯಾನ ಯೋಜನೆ**				
	i	ಸಸಿಗಳಿಗೆಸಹಾಯಧನ: ಉತ್ಕೃಷ್ಟಗುಣಮಟ್ಟದಸಸಿಗಳನ್ನುರೈತರಿಗೆಒದಗಿಸುವುದು	ಪ್ರತಿ ಹೆ. ಗರಿಷ್ಟ 12,000 ಗಳಂತೆ (ಪ್ರತಿ ಸಸಿಗೆ ರೂ.81.60 ರಂತೆ), ನಾಟಿ ಮಾಡಿದ ಪೂರ್ಣ ವಿಸ್ತೀರ್ಣಕ್ಕೆಸಹಾಯಧನ ನೀಡಲಾಗುತ್ತಿದೆ.	85	85

	ii	ಬೇಸಾಯ ಸಹಾಯಧನ: ಮೊದಲ 3 ವರ್ಷಸಸಿಗಳನ್ನು ಪೋಷಿಸಲು ರಾಸಯನಿಕಗೊಬ್ಬರ ವನ್ನು ಒದಗಿಸುವುದು.	ಗರಿಷ್ಟ 15ಹೆ ವರೆಗೆ ರಸಗೊಬ್ಬರದ ರೂಪದಲ್ಲಿ ಸಹಾಯಧನ ನೀಡಲಾಗುತ್ತಿದೆ. ಮೊದಲನೇ ವರ್ಷ-ರೂ.5,000/- ಎರಡನೇ ವರ್ಷ:- ರೂ.5,000/- ಮೂರನೇ ವರ್ಷ:- ರೂ.5,000/- ನಾಲ್ಕನೇ ವರ್ಷ:- ರೂ.5,000/-	50	50
II.	ರಾಜ್ಯವಲಯ ಯೋಜನೆಗಳು				
7	ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ				
	i)	ಆಯ್ದ ತೋಟಗಾರಿಕೆ ಬೆಳೆಗಳ ಪ್ರದೇಶ ಅಭಿವೃದ್ಧಿ ಹಾಗೂ ಎರಡನೇ ಮತ್ತು ಮೂರನೇ ವರ್ಷದ ನಿರ್ವಹಣೆ	ಸಣ್ಣ, ಅತೀ ಸಣ್ಣ ಮತ್ತು ಸಾಮಾನ್ಯ ರೈತರಿಗೆ ಶೇ. 50 ರಷ್ಟು ಸಹಾಯಧನ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ರೈತರಿಗೆ ಒಟ್ಟು ಘಟಕದ ಶೇ.90ರಷ್ಟು ಸಹಾಯಧನ ನೀಡಲಾಗುತ್ತಿದೆ.	50	90
	ii)	ನೀರು ಸಂಗ್ರಹಣ ಸ್ಥಾವರ	ಪ್ರತಿ ಘಟಕಕ್ಕೆ ಗರಿಷ್ಟರೂ.75,000/- ರಷ್ಟು ಸಹಾಯಧನನೀಡಲಾಗುತ್ತಿದೆ.	50	50
	iii)	ಪ್ಯಾಕ್ ಹೌಸ್ ಘಟಕಕ್ಕೆ ಸಹಾಯಧನ	ಪ್ಯಾಕ್ ಹೌಸ್ ಘಟಕ ಸ್ಥಾಪಿಸಲು ಗರಿಷ್ಠ ಘಟಕ ವೆಚ್ಚ ರೂ.4.00 ಲಕ್ಷಗಳಾಗಿದ್ದು. ಸಾಮಾನ್ಯ ವರ್ಗದ ರೈತರಿಗೆಶೇ.50 ರಂತೆ ರೂ.2.00 ಲಕ್ಷ ಸಹಾಯಧನ ಹಾಗೂ ಪರಿಶಿಷ್ಟ ಜಾತಿ/ಪಂಗಡಗಳ ರೈತರಿಗೆ ಶೇ.90 ರಂತೆ ರೂ.3.60 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ.	50	90
	iv)	ಪ್ಲಾಸ್ಟಿಕ್ ಕ್ರೇಟ್ಸ್	ಸಮಗ್ರ ತೋಟಗಾರಿಕೆ ಅಭಿವೃಧ್ಧಿ ಯೋಜನೆಯಡಿ ಆಯ್ಕೆಯಾದ	50	50

			ಎಲ್ಲಾ ವರ್ಗದ ಫಲಾನುಭವಿಗಳಿಗೆ ಪ್ಲಾಸ್ಟಿಕ್ ಕ್ರೇಟ್ (15 ರಿಂದ 20 ಕೆ.ಜಿ ಸಾಮರ್ಥ್ಯವುಳ್ಳ) ಖರೀದಿಗಾಗಿ ಶೇ.50 ರಂತೆ ಗರಿಷ್ಠ ರೂ.150.00 ಪ್ರತಿ ಕ್ರೇಟ್ಸ್ ಗೆ ಸಹಾಯಧನ ನೀಡಲಾಗುತ್ತಿದೆ.		
	v)	ಆಲೂಗಡ್ಡೆ ಬೆಳೆಗೆ ವಿಶೇಷ ಪ್ಯಾಕೇಜ್	ಆಲೂಗಡ್ಡೆ ಬೆಳೆ ಬೆಳೆದಂತಹ ರೈತರಿಗೆ ಜೈವಿಕ ಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿ ಮತ್ತು ಬೆಳೆ ವಿಮೆಗಾಗಿ ಪ್ರತಿ ಹೆಕ್ಟೇರ್ ಗೆ ರೂ.5000.00 ದಂತೆಪ್ರತಿ ಫಲಾನುಭವಿಗೆ ಗರಿಷ್ಟ 2 ಹೆಕ್ಟೇರ್ ವರೆಗೆ ರೂ.10,000 ಗಳನ್ನು ನೀಡಲಾಗುತ್ತಿದೆ.	-	-
	vi)	ದೃಢೀಕೃತ ಬಿತ್ತನೆ ಆಲೂಗೆಡ್ಡೆ ಬೀಜ ಖರೀದಿಗಾಗಿ ಸಹಾಯಧನ	ಪ್ರತಿ ಫಲಾನುಭವಿಗೆ ಪ್ರತಿ ಕಿಲೋ ಗ್ರಾಂ. ಗೆ ಗರಿಷ್ಟ ರೂ.11.72 ರಂತೆ 2 ಹೆಕ್ಟೇರ್ ಪ್ರದೇಶಕ್ಕೆ ಮಿತಿಗೊಳಿಸಿ ಗರಿಷ್ಠ 3 ಟನ್ ವರೆಗೆ ಸಹಾಯಧನನೀಡಲಾಗುತ್ತಿದೆ.	50	50
	iv)	ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ	ಗರಿಷ್ಠ ರೂ.10.00 ಲಕ್ಷಗಳಿಗೆ ಮಿತಿಗೊಳಿಸಿ ಸಹಾಯಧನನೀಡಲಾಗುತ್ತಿದೆ	50	-
	v)	ಕೈತೋಟ ಮತ್ತು ತಾರಸಿ ತೋಟಗಳ ಅಭಿವೃದ್ಧಿಗೆ ಉತ್ತೇಜನ ಅ) ಕೈತೋಟ ತರಬೇತಿ ಮತ್ತು ಕಿಟ್ ವಿತರಣೆ ಆ) ತಾರಸಿ ತೋಟದ ತರಬೇತಿ ಮತ್ತು ಕಿಟ್ ವಿತರಣೆ	ಪ್ರತಿ ಘಟಕಕ್ಕೆ ಗರಿಷ್ಠ ರೂ.1.00 ಲಕ್ಷಗಳವರೆಗೆ ಸಹಾಯಧನ ನೀಡಲಾಗುತ್ತಿದೆ. ಪ್ರತಿ ಘಟಕಕ್ಕೆ ಗರಿಷ್ಠ ರೂ.2.25 ಲಕ್ಷಗಳವರೆಗೆ ಸಹಾಯಧನ ನೀಡಲಾಗುತ್ತಿದೆ.	100 100	100 100
	vi)	ರೈತ ಉತ್ಪಾದಕರ ಸಂಸ್ಥೆಗಳಿಗೆ (FPO) ಸಹಾಯಧನ	ರಾಜ್ಯ ಸರ್ಕಾರದ ಕಾರ್ಯಕ್ರಮದಡಿ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕೆ ಶೇ.90 ರಂತೆ ಪ್ರತಿ ರೈತ ಉತ್ಪಾದಕರ ಸಂಸ್ಥೆಗೆ ಗರಿಷ್ಠ ರೂ.1.00 ಕೋಟಿಗಳ ಸಹಾಯಧನ. ಪ್ರತಿ ರೈತ ಉತ್ಪಾದಕ ಸಂಸ್ಥೆಗೆ ವ್ಯವಹಾರಿಕ ಬಂಡವಾಳವಾಗಿ (ಆವರ್ತನ ನಿಧಿ ರೂಪದಲ್ಲಿ) ರೂ.25.00 ಲಕ್ಷಗಳ ನೆರವು.	-	-
	vii	ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ	ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ತೋಟಗಾರಿಕೆ	-	-

		ತೋಟಗಾರಿಕೆ ಅಭಿವೃಧ್ಧಿ (PPP-IHD)	ಅಭಿವೃಧ್ಧಿ (PPP-IHD) ಯೋಜನೆಯಡಿ ರೈತರಿಗೆ ಬಿತ್ತನೆ ಹಂತದಿಂದ ಮಾರುಕಟ್ಟೆ ಹಂತದವರೆಗೂ ನೆರವನ್ನು ಒದಗಿಸಲಾಗುತ್ತಿದೆ. ಅಲ್ಲದೇ, ಕೃಷಿ ವಿಜ್ಞಾನ ಕೇಂದ್ರ ಮತ್ತುರೈತ ಉತ್ಪಾದಕ ಸಂಘಗಳ ಸಹಭಾಗಿತ್ವದಲ್ಲಿ ರೈತರಿಗೆ ವಿಸ್ತರಣೆ ಸೇವೆಯನ್ನು ಒದಗಿಸಲಾಗುತ್ತಿದೆ.		
	viii	ಗೇರು ಅಭಿವೃದ್ಧಿ	ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿಪ್ರತಿ ಘಟಕಕ್ಕೆ ಒಟ್ಟು ರೂ. 45077/- ರಂತೆ ಹಾಗೂ ಮೊದಲನೆ ಮತ್ತು ಎರಡನೇ ವರ್ಷದ ನಿರ್ವಹಣೆಗೆ ಪ್ರತಿ ವರ್ಷಕ್ಕೆ ರೂ.21908/- ರಂತೆ ನಿಗಧಿಪಡಿಸಲಾಗಿದೆ.	50	90
	viiii	ನೀರಿನ ಟ್ಯಾಂಕರ್ ಖರೀದಿಗೆ ಸಹಾಯಧನ	ನೀರಿನ ಟ್ಯಾಂಕರ್ ಖರೀದಿಗೆ ಸಹಾಯಧನ ಕಾರ್ಯಕ್ರಮದಡಿ ಪ್ರತೀ 4000 ಲೀ ಸಾಮರ್ಥ್ಯದ ಘಟಕಕ್ಕೆ 1.25 ಲಕ್ಷ ರೂಗಳನ್ನು ಹಾಗೂ ಪ್ರತೀ 5000 ಲೀ ಸಾಮರ್ಥ್ಯದ ಘಟಕಕ್ಕೆ 1.40 ಲಕ್ಷ ರೂಗಳನ್ನು, ನಿಗಧಿಪಡಿಸಲಾಗಿದೆ.	50	90
8	ಹೂ ಕೃಷಿಗೆ ಉತ್ತೇಜನ				
	i.	ಹಸಿರು ಮನೆಯಲ್ಲಿ ಹಳೆಯ ಮತ್ತು ಅನುತ್ಪಾದಕ ಹೂವಿನ ಗಿಡಗಳನ್ನು ತೆಗೆಯುವುದು ಮತ್ತು ಹೊಸ ಗಿಡಗಳನ್ನು ನೆಡಲು ಸಹಾಯಧನ	ಘಟಕ ವೆಚ್ಚದ ಶೇ.50 ರಂಥೆ ಅಥವಾ ಪ್ರತಿ ಚದರ ಮೀಟರ್ ಗೆ ರೂ.50.00 ರಂತೆ ಗರಿಷ್ಠ 1 ಹೆಕ್ಟೇರ್‌ವರೆಗೆ (10,000 ಚ.ಮೀ) ಗರಿಷ್ಠ ರೂ.5.00 ಲಕ್ಷಗಳಿಗೆ ಸಹಾಯಧನ ಮೀರದಂತೆ ನೀಡಲಾಗುತ್ತಿದೆ.	50	50
	ii.	ಹಸಿರು ಮನೆಗಳ polythene sheet ಗಳ ಬದಲಾವಣೆಗೆ ಸಹಾಯಧನ	ಘಟಕ ವೆಚ್ಚದ ಶೇ.50 ರಂಥೆ ಅಥವಾ ಪ್ರತಿ ಚದರ ಮೀಟರ್ ಗೆ ರೂ.30.00 ರಂತೆ ಗರಿಷ್ಠ 1 ಹೆಕ್ಟೇರ್‌ವರೆಗೆ (10,000 ಚ.ಮೀ) ಗರಿಷ್ಠ ರೂ.3.00 ಲಕ್ಷಗಳಿಗೆ ಸಹಾಯಧನ ಮೀರದಂತೆ ನೀಡಲಾಗುತ್ತಿದೆ.	50	50

9	**ತೋಟಗಾರಿಕೆ ಬೆಳೆಗಳ ರೋಗ ಮತ್ತುಕೀಟಗಳ ಸಮಗ್ರ ನಿಯಂತ್ರಣ**		ತೋಟಗಾರಿಕೆ ಬೆಳೆಗಳಿಗೆ ತಗಲುವರೋಗ ಮತ್ತು ಕೀಟಗಳ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ಖರೀದಿಸಿದ ರೈತರಿಗೆ ಪ್ರತಿ ಹೆಕ್ಟೇರಿಗೆ ತಗಲುವ ವೆಚ್ಚದಂತೆ ಶೇ.50 ರಂತ ಗರಿಷ್ಠ 2 ಹೆಕ್ಟೇರ್ ವರೆಗೆ ರೂ.7500.00 ಗಳ ಸಹಾಯಧನ ನೀಡಲಾಗುತ್ತಿದೆ.	75	90
10	**ಉತ್ಪಾದನಾ ಸುಧಾರಣಾ ಕಾರ್ಯಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತ ಬೇಸಾಯ (ರಾಜ್ಯವಲಯ)**				
	a	ತೆಂಗು ಬೆಳೆಗೆ ತಗುಲುವ ಕೀಟ ಮತ್ತು ರೋಗಗಳ ಸಮಗ್ರ ನಿರ್ವಹಣೆ ಕಾರ್ಯಕ್ರಮ	ತೆಂಗು ಬೆಳೆಗೆ ತಗುಲುವ ಕೀಟ ಮತ್ತು ರೋಗಗಳ ನಿಯಂತ್ರಣಕ್ಕೆ ಕೀಟ ಮತ್ತು ರೋಗಗಳಿಗೆ ಅನುಗುಣವಾಗಿ ಒಟ್ಟು ಘಟಕ ವೆಚ್ಚದ ಶೇ.75 ರಂತೆ ಸಸ್ಯ ಸಂರಕ್ಷಣ ಔಷಧಿಗಳನ್ನು / ಪರಿಕರಗಳನ್ನು ಖರೀದಿಸಿದ ರೈತರಿಗೆ ಪ್ರತಿ ಹೆಕ್ಟೇರ್ ಗೆ ಗರಿಷ್ಠ ರೂ.5,250.00 ರಂತೆಗರಿಷ್ಠ 2 ಹೆಕ್ಟೇರ್ ವರೆಗೆ ಮಿತಿಗೊಳಿಸಿ ಸಹಾಯಧನ ನೀಡಲಾಗುತ್ತಿದೆ.	75	75
	b	ತೆಂಗಿನ ತೋಟಗಳ ಪ್ರದೇಶ ವಿಸ್ತರಣೆ (ತೆಂಗು ಅಭಿವೃದ್ಧಿ ಮಂಡಳಿ ಅನುಷ್ಠಾನಗೊಳಿಸುವ ಪ್ರದೇಶಕ್ಕೆ ಅನುಗುಣವಾಗಿ ರಾಜ್ಯದ ಪಾಲು)	2018-19 ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಶೇ.50 ರಂತೆ ಸಂಕರಣ ತಳಿಗೆ ರೂ.13500.00 ಮತ್ತು ಗಿಡ್ಡ ತಳಿಗೆ ರೂ.15000.00 ಹಾಗೂ ಎತ್ತರದ ತಳಿಗಳಿಗೆ ರೂ.13000.00 ದಂತೆ ಪ್ರತಿ ಫಲಾನುಭವಿಗೆ ಗರಿಷ್ಟ 4 ಹೆಕ್ಟೇರ್ ಗಳ ವರೆಗೆ ಒಂದೇ ಕಂತಿನಲ್ಲಿ ಸಹಾಯಧನವನ್ನು ನೀಡಲಾಗುತ್ತಿದೆ.	50	50
	c	ಮಂಡ್ಯ ಜಿಲ್ಲೆಯ ಕೃಷ್ಣರಾಜಸಾಗರ ತೋಟಗಾರಿಕೆ ಕ್ಷೇತ್ರದಲ್ಲಿ TXD/ DXT ಹೈಬ್ರಿಡ್ ತೆಂಗಿನ ಸಸಿಗಳ ಉತ್ಪಾದನೆ	2018-19 ನೇ ಸಾಲಿಗೆ ಸುಮಾರು 70000 ಸಂಖ್ಯೆಯTXD / DXT ಹೈಬ್ರಿಡ್ ಬೀಜದ ಕಾಯಿಗಳ ಬಿತ್ತನೆಗಾಗಿ ಶೇ.50 ರಂತೆ ರಾಜ್ಯಪಾಲಿನ ಅನುದಾನ ರೂ.10.50 ಲಕ್ಷಗಳನ್ನು ರಾಜ್ಯ ವಲಯದ ತೆಂಗುಬೆಳೆ ಅಭಿವೃದ್ಧಿ ಯೋಜನೆಯಡಿ ಲಭ್ಯವಿರುವ ಅನುದಾನವನ್ನು ಬಳಸಿಕೊಂಡು ಉಳಿದ ಶೇ.50 ರಷ್ಟು ಅನುದಾನವನ್ನು KSHDA ವತಿಯಿಂದ ವೆಚ್ಚ ಭರಿಸಲು ಕ್ರಮ ವಹಿಸಲಾಗುತ್ತಿದೆ.	-	-

	d	ನೀರಾ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ			
		ಅ) ನೀರಾ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಸಹಾಯಧನ	ನೀರಾ ಸಂಸ್ಕರಣಾ ಘಟಕ ಸ್ಥಾಪಿಸಲು ಒಟ್ಟು ಘಟಕ ವೆಚ್ಚದ ಶೇ.50 ರಂತೆ ಗರಿಷ್ಠ ರೂ.100.00 ಲಕ್ಷಗಳಿಗೆ ಮೀರದಂತೆ ಸಹಾಯಧನ ನೀಡುವುದು.	50	50
		ಆ) ನೀರಾ ತಂತ್ರಜ್ಞರಿಗೆ ತರಬೇತಿ	ತೆಂಗು ಉತ್ಪಾದಕರ ಕಂಪನಿ ಅಥವಾ ತೋಟಗಾರಿಕೆ ರೈತ ಉತ್ಪಾದಕರ ಸಂಸ್ಥೆಯ ಸದಸ್ಯರುಗಳಿಗೆ ಹಾಗೂ ಇತರೆ ಆಸಕ್ತ ರೈತರಿಗೆ ತೆಂಗು ಅಭಿವೃದ್ಧಿ ಮಂಡಳಿಯ ಸಹಯೋಗದೊಂದಿಗೆ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದೆ.	-	-
11	**ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ**				
	a)	ಆಸಕ್ತ ಫಲಾನುಭವಿಗಳಿಗೆ ಜೇನು ಪೆಟ್ಟಿಗೆ, ಜೇನು ಕುಟುಂಬಗಳ ಹಾಗೂ ಸ್ಟ್ಯಾಂಡ್ ಗಳ ಖರೀದಿಗಾಗಿ ಸಹಾಯಧನ	ಪ್ರತಿ ಜೇನು ಪೆಟ್ಟಿಗೆ, ಜೇನು ಕುಟುಂಬಗಳ ಹಾಗೂ ಸ್ಟ್ಯಾಂಡ್ ಗಳ ಖರೀದಿಗಾಗಿಶೇ.40 ರಂತೆ ಗರಿಷ್ಟ ರೂ.1,800/-ಗಳಂತೆ (ಗರಿಷ್ಟ 4 ಪೆಟ್ಟಿಗೆ ಹಾಗೂ ಕುಟುಂಬಕ್ಕೆ) ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ರೈತರಿಗೆ ಶೇ.90ರಂತೆ ಗರಿಷ್ಟ ರೂ.4050/ ಗಳಂತೆ ಸಹಾಯಧನನೀಡಲಾಗುತ್ತಿದೆ.	40	90
	b)	ಜೇನು ಸಾಕಾಣೆ ಆಸಕ್ತರಿಗೆ ತರಬೇತಿ	ಪ್ರತಿ ಫಲಾನುಭವಿಗೆ 400 ರಂತೆ ಪ್ರತಿ ತಂಡಕ್ಕೆ 30 ಜನರಂತೆ 2 ದಿನಗಳ ಕಾಲ ತರಬೇತಿ ನೀಡಲಾಗುತ್ತಿದೆ.	-	-
	c)	ಮಧುವನ ಜೇನು ಸಾಕಾಣೆ ಆಸಕ್ತರಿಗೆ ಖಾಸಗಿ ಮಧುವನ ಸ್ಥಾಪನೆಗೆ ಸಹಾಯಧನ	ಪ್ರತಿ ಫಲಾನುಭವಿಗೆ ಶೇ.50 ರಂತೆ ರೂ.50000/- ಸಹಾಯಧನ ನೀಡಲಾಗುತ್ತಿದೆ.	50	50
12	**ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ (ಸುಜಲಾ-III)**				
		ಉತ್ಪಾದಕತೆ ಹೆಚ್ಚಿಸಲು ವಿಸ್ತರಣೆ ಮತ್ತು ಪ್ರಾತ್ಯಕ್ಷತೆ			

	i)	ಬಹುವಾರ್ಷಿಕ ಬೆಳೆಗಳ ಪ್ರಾತ್ಯಕ್ಷತೆ	ಪ್ರತಿ ಹೆಕ್ಟೇರ್‌ಗೆ ವಿವಿಧ ಹಣ್ಣಿನ ಬೆಳೆಗಳಿಗೆ ಅನುಗುಣವಾಗಿ ರೂ.70,000/- ವರೆಗೆ ರೈತರ ತೋಟದಲ್ಲಿ ಪ್ರಾತ್ಯಕ್ಷತೆಯನ್ನು ಸ್ಥಾಪಿಸಲು ಅನುದಾನ ನಿಗದಿಪಡಿಸಲಾಗಿದೆ.	100%	100%
	ii)	ವಾರ್ಷಿಕ ಬೆಳೆಗಳ ಪ್ರಾತ್ಯಕ್ಷತೆ (ತರಕಾರಿಗಳು)	ವಿವಿಧ ತರಕಾರಿ ಬೆಳೆಗಳಿಗೆ ಅನುಗುಣವಾಗಿ ಪ್ರತಿ ಹೆಕ್ಟೇರ್‌ಗೆ ರೂ.30,000/- ರಂತೆ ರೈತರ ತೋಟದಲ್ಲಿ ಪ್ರಾತ್ಯಕ್ಷತೆಯನ್ನು ಸ್ಥಾಪಿಸಲು ಅನುದಾನ ನಿಗದಿಪಡಿಸಲಾಗಿದೆ.	100%	100%
	iii)	ರೈತರಿಗೆ ತರಬೇತಿ	ಪ್ರತಿ ತರಬೇತಿಗೆ ರೂ.12,500/- ಅನುದಾನ ನಿಗದಿಪಡಿಸಿದ್ದು, 50 ರೈತರಿಗೆ ತಂತ್ರಜ್ಞಾನ ಅಳವಡಿಕೆ ಬಗ್ಗೆ ಒಂದು ದಿನದ ತರಬೇತಿ ನೀಡಲಾಗುತ್ತಿದೆ.	100%	100%
	iv)	ರೈತರಿಗೆ ಪ್ರವಾಸ	ರೂ.1.00 ಲಕ್ಷ ವೆಚ್ಚದಲ್ಲಿ 3 ದಿವಸಗಳ ಅವಧಿಗೆ 50 ಜನ ರೈತರಿಗೆ ರಾಜ್ಯದ ಜಲಾನಯನ ಪ್ರದೇಶಗಳಿಗೆ ಪ್ರವಾಸ ಕೈಗೊಳ್ಳಲಾಗುತ್ತಿದೆ.	100%	100%
	v)	ಕ್ಷೇತ್ರೋತ್ಸವ	ರೈತರ ತೋಟದಲ್ಲಿ ಅಳವಡಿಕೆಯಾದ ತಂತ್ರಜ್ಞಾನದ ಪ್ರಚಾರಕ್ಕಾಗಿ ರೂ.20,000/- ವೆಚ್ಚದಲ್ಲಿ 100 ರೈತರಿಗೆ ಒಂದು ದಿವಸದ ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಗುತ್ತಿದೆ.	100%	100%
		ತೋಟಗಾರಿಕೆ ರೈತರ ಮಣ್ಣು ಮತ್ತು ಬೆಳೆ ನಿರ್ವಹಣೆ			
	i)	ರೈತರ ಜಮೀನುಗಳ ಬದುಗಳಲ್ಲಿ ಕಂದಕಗಳ ನಿರ್ಮಾಣ(TCB)	ದಾವಣಗೆರೆ ಜಿಲ್ಲೆಯಲ್ಲಿ ಈ ಕಾರ್ಯಕ್ರಮ ಅನುಷ್ಠಾನ ಮಾಡುತ್ತಿದ್ದು, ರೈತರ ಜಮೀನಿನ ಬದುಗಳಲ್ಲಿ 2.4 ಮೀ ಅಗಲ 0.45 ಮೀ ಎತ್ತರದ ಕಂದಕಗಳನ್ನು ನೀರು ಸಂಗ್ರಹಣೆ ಮತ್ತು ಇಂಗುವಿಕೆಗಾಗಿ ನಿರ್ಮಿಸಿಕೊಡಲಾಗುತ್ತಿದೆ.	100%	100%
	ii)	ಸಮಸ್ಯಾತ್ಮಕ ಮಣ್ಣುಗಳ ಉಪಚಾರ	ಗದಗ ಜಿಲ್ಲೆಯಲ್ಲಿ ಈ ಕಾರ್ಯಕ್ರಮ ಅನುಷ್ಠಾನ ಮಾಡುತ್ತಿದ್ದು, ರೈತರ ಜಮೀನಿನ ಸಮಸ್ಯಾತ್ಮಕ ಮಣ್ಣುಗಳನ್ನು ಸರಿಪಡಿಸಲು ಪ್ರತಿ ಹೆಕ್ಟರ್‌ಗೆ ರೂ. 3,250.00 ರ ವೆಚ್ಚ ಭರಿಸಿ	100%	100%

			1.ಜಿಪ್ಸಂ-5 ಕ್ವಿಂಟಲ್ 2.ಜಿಂಕ್-12.5 ಕೇಜಿ 3.ಬೋರಾನ್-2.5 ಕೆ.ಜಿ ಪೋಷಕಾಂಶಗಳನ್ನು ಪೂರೈಕೆ ಮಾಡಲಾಗುತ್ತಿದೆ.		
	ಸಿ)	ಕೊಯ್ಲೋತ್ತರ ನಿರ್ವಹಣೆ		100%	100%
	i)	ರೈತ ಉತ್ಪಾದಕ ಸಂಸ್ಥೆಗೆ ನೆರವು(FPO)	ಹಣ್ಣು ಮಾಗುವಿಕೆ ಘಟಕ ಸ್ಥಾಪನೆಗೆ ಒಂದಕ್ಕೆ ರೂ. 50.00 ಲಕ್ಷದ ಆರ್ಥಿಕ ನೆರವು ಕಲ್ಪಿಸಲಾಗುತ್ತಿದೆ.	100%	
	ಡಿ)	ತೋಟಗಾರಿಕೆ ರೈತರ ಮಾರುಕಟ್ಟೆ ಸಾಮರ್ಥ್ಯ ಹೆಚ್ಚಿಸುವುದು			
	i)	ರೈತ ಉತ್ಪಾದಕ ಸಂಸ್ಥೆಗೆ ನೆರವು(FPO)	FPO ಸದಸ್ಯರ ತೋಟದ ಉತ್ಪನ್ನಗಳನ್ನು ಮಾರಟಕ್ಕೆ ಉತ್ತೇಜಿಸಲು IIHR ನಿರ್ಮಿತ ಪ್ರತಿ ಮೊಬೈಲ್ ವೆಂಡ್ಡಿಂಗ್ ವ್ಯಾನ್ ಖರೀದಿಸಲು ರೂ. 11.00 ಲಕ್ಷದ ಆರ್ಥಿಕ ನೆರವು ಕಲ್ಪಿಸಲಾಗುತ್ತಿದೆ.	100%	
13	ಕೃಷಿಭಾಗ್ಯ ಯೋಜನೆ				
	i	ಪಾಲಿಮನೆ ಘಟಕ	ಪ್ರತಿ ಘಟಕಕ್ಕೆ ಗರಿಷ್ಟ ರೂ.38.87 ಲಕ್ಷಗಳನ್ನು ಪಾಲಿ ಮನೆ ನಿರ್ಮಾಣ, ಮೋಟಾರ್ ಅಳವಡಿಕೆ ಹಾಗೂ ಅಧಿಕ ಮೌಲ್ಯದ ಬೆಳೆ ಉತ್ಪಾದನೆಗೆ ಸಹಾಯಧನ ನೀಡಲಾಗುತ್ತಿದೆ.	50	90
	ii	ನೆರಳು ಪರದೆ ಘಟಕ	ಪ್ರತಿ ಘಟಕಕ್ಕೆ ಗರಿಷ್ಠ ರೂ.20.96 ಲಕ್ಷಗಳನ್ನು ನೆರಳು ಪರದೆ ನಿರ್ಮಾಣ, ಹಾಗೂ ಅಧಿಕ ಮೌಲ್ಯದ ಬೆಳೆ ಉತ್ಪಾದನೆಗೆ ಸಹಾಯಧನ ನೀಡಲಾಗುತ್ತಿದೆ.	50	90
	iii	ಕೃಷಿ ಹೊಂಡ ಘಟಕ	ಪ್ರತಿ ಘಟಕಕ್ಕೆ ಗರಿಷ್ಠ ರೂ.1.55 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ.	50	90

III.	**ಜಿಲ್ಲಾವಲಯ ಯೋಜನೆಗಳು**			
15	ಹನಿ ನೀರಾವರಿಗಾಗಿ ಕೇಂದ್ರವಲಯ ಯೋಜನೆ	ಹನಿ ನೀರಾವರಿ ನೀರಾವರಿ ಅಳವಡಿಕೆಗೆ ಗರಿಷ್ಠ 5 ಹೆಕ್ಟೇರ್ ಪ್ರದೇಶಕ್ಕೆ ಸಹಾಯಧನ ನೀಡಲಾಗುವುದು. ಮೊದಲು 2 ಹೆಕ್ಟೇರ್ ಪ್ರದೇಶಕ್ಕೆ ಶೇ. 90 ರಷ್ಟು ಸಹಾಯಧನ, ಮತ್ತು ನಂತರದ 3 ಹೆಕ್ಟೇರ್ ಪ್ರದೇಶಕ್ಕೆ ಶೇ. 50 ರಷ್ಟು ಸಹಾಯಧನ ನೀಡಲಾಗುತ್ತಿದೆ.	90	90
16	ಶೀತಲ ಗೃಹಗಳ ಸಹಾಯಧನ ಯೋಜನೆ	ಶೀತಲ ಗೃಹಗಳು ಬಳಸುವ ಪ್ರತಿ ಯೂನಿಟ್ ವಿದ್ಯುಚ್ಛಕ್ತಿಗೆ ರೂ.1.00ರಂತೆ ಸಹಾಯಧನ ನೀಡಲಾಗುತ್ತಿದೆ.	-	-
17	ರೈತರಿಗೆ ಸಹಾಯ	• ಹಣ್ಣಿನ ಮತ್ತು ಇತರೆ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳ ಕಸಿ/ ಸಸಿಗಳನ್ನು ರೈತ ಫಲಾನುಭವಿಗಳಿಗೆ ಗರಿಷ್ಟ ರೂ.1,000.00 ಪ್ರತಿ ಎಕರೆಗೆ ಸಹಾಯಧನ ನೀಡಲಾಗುತ್ತಿದೆ.	100	100
		• ತೋಟಗಾರಿಕೆ ಬೆಳೆಗಳಿಗೆ ತಗಲುವ ಕೀಟ/ರೋಗ ಬಾಧೆಯನ್ನು ನಿವಾರಿಸಲು ಉಪಯೋಗಿಸುವ ಸಸ್ಯ ಸಂರಕ್ಷಣಾ ಔಷಧಿಗಳಿಗೆ ಶೇ.50ರಂತೆ ಗರಿಷ್ಟ ರೂ.2,000.00 ರಂತೆ ಪ್ರತಿ ಹೆಕ್ಟೇರ್‌ಗೆ ಸಹಾಯಧನ ನೀಡಲಾಗುತ್ತಿದೆ.	50	50
18	ರೈತರಿಗೆ ತರಬೇತಿ	• ಸುಧಾರಿತ ಬೇಸಾಯ, ಆಧುನಿಕ ತಂತ್ರಜ್ಞಾನದ ಬಗ್ಗೆ ಅರಿವು ಮೂಡಿಸುವುದು, ರೈತರಲ್ಲಿ ಸ್ಪರ್ಧಾತ್ಮಕ ಮನೋಭಾವನೆಯನ್ನು ಪ್ರೋತ್ಸಾಹಿಸಿ ಆತ್ಮ ವಿಶ್ವಾಸ ಹೆಚ್ಚಿಸುವುದು ಮತ್ತು ಆರ್ಥಿಕತೆ ಬಗ್ಗೆ ಸದೃಢ ಗೊಳಿಸುವುದು.	100	100

			• ಹಣ್ಣು / ತರಕಾರಿ ಇತ್ಯಾದಿಗಳನ್ನು ಕಡಿಮೆ ಬೆಲೆಯಲ್ಲಿ ದೊರೆಯುವ ಸಮಯದಲ್ಲಿ ಗೃಹ ಬಳಕೆಗೆ ಬಳಸಿ-ಕೊಳ್ಳಲು ಕಡಿಮೆ ವೆಚ್ಚದ ಶೇಖರಣೆ ಮತ್ತು ಸಂಸ್ಕರಣೆ ತಂತ್ರಜ್ಞಾನವನ್ನು ಬಳಸಿ ಸಂಸ್ಕರಿಸಿದ ಉತ್ಪನ್ನಗಳನ್ನು ತಯಾರಿಸುವ ಸಲುವಾಗಿ ಮಹಿಳೆಯರಿಗೆ ತರಬೇತಿ ನೀಡುವುದು. • ರೈತರಿಗೆ ತರಬೇತಿ ನೀಡಲು ಒಂದು ಅಥವಾ ಎರಡು ದಿನಗಳ ತರಬೇತಿಯನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಪ್ರತಿ ರೈತರಿಗೆ ಒಂದು ದಿನದ ಅವಧಿಗೆ ರೂ.400/-ರಂತೆ ವೆಚ್ಚ ಭರಿಸಲಾಗುತ್ತಿದೆ.		
19	**ರಾಷ್ಟ್ರೀಯ ಎಣ್ಣೆಕಾಳು ಮತ್ತು ಎಣ್ಣೆತಾಳೆ ಅಭಿಯಾನ ಯೋಜನೆ– ಜಿಲ್ಲಾವಲಯ**				
	i	ಡೀಸಲ್ / ಎಲೆಕ್ಟ್ರಿಕಲ್ ಪಂಪ್ ಸೆಟ್ ಕೊಳ್ಳಲು ಸಹಾಯಧನ; ವಿದ್ಯುಚ್ಛಕ್ತಿ ಅಭಾವದ ಪ್ರದೇಶಗಳಲ್ಲಿ ನೀರುಣಿಸಲು	ಶೇ.50 ರಂತೆ ಪ್ರತಿ ಘಟಕಕ್ಕೆ ಗರಿಷ್ಟ ರೂ.15,000/- ಸಹಾಯಧನ ನೀಡಲಾಗುತ್ತಿದೆ.	50	50
	ii	ಕೊಳವೆ ಬಾವಿ	ಪ್ರತಿ ರೈತರಿಗೆ / ಘಟಕಕ್ಕೆ ಶೇ.50 ರಂತೆ ಗರಿಷ್ಟ ರೂ.50,000/- ಸಹಾಯಧನನೀಡಲಾಗುತ್ತಿದೆ.	50	50
	iii	ತಾಳೆ ತಾಕಿನಲ್ಲಿ ಅಂತರ ಬೆಳೆಗೆ ಸಹಾಯಧನ;	ಪ್ರತಿ ಹೆಕ್ಟೇರಿಗೆ ಶೇ.50 ರಂತೆ ಗರಿಷ್ಟ ರೂ.5,000/- ಸಹಾಯಧನ ನೀಡಲಾಗುತ್ತಿದೆ.	50	50
	vii	ತಾಳೆಹಣ್ಣು ಸಂರಕ್ಷಣಾ ತಂತಿ ಜಾಲರಿ	ಪ್ರತಿ ಘಟಕಕ್ಕೆ ಶೇ.50 ರಂತೆ ಗರಿಷ್ಟ ರೂ.15,000/- ಸಹಾಯಧನನೀಡಲಾಗುತ್ತಿದೆ.	50	50
	ix	ಮೋಟಾರ್ ಚಾಲಿತ ತಾಳೆಹಣ್ಣು ಕಟಾವು ಉಪಕರಣ	ಪ್ರತಿ ಘಟಕಕ್ಕೆ ಶೇ.50 ರಂತೆ ಗರಿಷ್ಟರೂ.3,000/- ಸಹಾಯಧನನೀಡಲಾಗುತ್ತಿದೆ.	50	50

20	**ತೆಂಗು ಬೀಜ ಸಂಗ್ರಹಣೆ ಮತ್ತು ನರ್ಸರಿ ನಿರ್ವಹಣೆ (D-05) ಯೋಜನೆ (ಜಿಲ್ಲಾವಲಯ)**				
		ಜಿಲ್ಲೆಗಳಿಗೆ ನಿಗದಿಪಡಿಸಿದ ಭೌತಿಕ ಗುರಿಗಳಲ್ಲಿ ಸ್ಥಳೀಯ ತೆಂಗಿನ ಸಸಿಗಳ ಉತ್ಪಾದನೆ ಜೊತೆಗೆ ಕನಿಷ್ಟ ಶೇ.25 ರಷ್ಟು ಎಳನೀರು/ಗಿಡ್ಡ ಜಾತಿಯ ತಳಿಗಳ ತೆಂಗಿನ ಕಾಯಿಗಳನ್ನು (ಬೀಜದ) ಬಿತ್ತನೆ ಮಾಡಿ ತೆಂಗಿನ ಸಸಿಗಳನ್ನು ಉತ್ಪಾದಿಸಿ ರೈತರಿಗೆ ಇಲಾಖೆ ನಿಗದಿಪಡಿಸಿದ ದರದಂತೆ ವಿತರಿಸಲಾಗುತ್ತಿದೆ.		-	-
21	ಜೇನು ಸಾಕಾಣಿಕೆ (ಜಿಲ್ಲಾವಲಯ)				
		ಆಸಕ್ತ ಫಲಾನುಭವಿಗಳಿಗೆ ಜೇನು ಪೆಟ್ಟಿಗೆ ಹಾಗೂ ಜೇನು ಕುಟುಂಬಗಳ ಖರೀದಿಗಾಗಿ ಸಹಾಯಧ	ಪ್ರತಿ ಜೇನು ಪೆಟ್ಟಿಗೆ ಹಾಗೂ ಕುಟುಂಬದ ಪ್ಯಾಕೇಜ್ ಗೆ ಶೇ.40 ರಂತೆ ಗರಿಷ್ಟ ರೂ.1800/- ಗಳಂತೆ (ಗರಿಷ್ಟ 4 ಪೆಟ್ಟಿಗೆ ಹಾಗೂ ಕುಟುಂಬಕ್ಕೆ) ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ರೈತರಿಗೆ ಶೇ.90 ರಂತೆ ಗರಿಷ್ಟ ರೂ.4050/ ಗಳಂತೆ ಸಹಾಯಧನ ನೀಡಲಾಗುತ್ತಿದೆ.		
22	**ವಿಶೇಷ ಘಟಕ ಯೋಜನೆಹಾಗೂ ಗಿರಿಜನ ಉಪಯೋಜನೆ**				
	i	ಪ್ರದೇಶ ವಿಸ್ತರಣೆ		90	90
	ii	ಸೂಕ್ಷ್ಮ ನೀರಾವರಿ	2018-19ನೇ ಸಾಲಿನ ಸೂಕ್ಷ್ಮ ನೀರಾವರಿ ಯೋಜನೆಯ ಮಾರ್ಗಸೂಚಿಯನ್ವಯ ತರಕಾರಿ ಮತ್ತು ಹೂವಿನ ಬೆಳೆಗಳಿಗೆ ತುಂತುರು ನೀರಾವರಿಅಳವಡಿಕೆಗೆ ಸಹಾಯಧನ ನೀಡಲಾಗುತ್ತಿದೆ.	90	90
	iii	ಪ್ಲಾಸ್ಟಿಕ್ ಕ್ರೇಟ್ಸ್	ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ರೈತರಿಗೆ ತೋಟಗಾರಿಕೆ ಬೆಳೆಗಳ ಕೊಯ್ಲೋತ್ತರ ನಷ್ಟ ತಪ್ಪಿಸುವ ಸಲುವಾಗಿ ಪ್ಲಾಸ್ಟಿಕ್ ಕ್ರೇಟ್ಸ್‌ಗಳನ್ನು ಪ್ರತಿ ಫಲಾನುಭವಿಗೆ ಶೇ. 90 ರಂತೆ ಗರಿಷ್ಟ 25 ಸಂಖ್ಯೆಯಲ್ಲಿ ಪ್ರಸಕ್ತ ಸಾಲಿನಲ್ಲಿ ನಿಗದಿಪಡಿಸಿದಂತಹ ಇಲಾಖಾವರದಲ್ಲಿ ವಿತರಿಸಲಾಗುತ್ತಿದೆ.	90	90

	iv	ಸಣ್ಣ ರೈತರಿಗೆ ತರಕಾರಿ ಬೀಜ ವಿತರಣೆ.	ಘಟಕ ವೆಚ್ಚ ಗರಿಷ್ಟ ರೂ. 2000/- ಗಳಾಗಿದ್ದು ಶೇ.90 ರಂತೆ ಪ್ರತಿ ಫಲಾನುಭವಿಗೆ ರೂ.1800/ಎಕರೆ ಗಳವರೆಗೆ ಸಹಾಯಧನ ನೀಡಲಾಗುತ್ತಿದೆ.	90	90

ತೋಟಗಾರಿಕೆ ಜಂಟಿ ನಿರ್ದೇಶಕರು (ಯೋಜನೆ)
ಲಾಲ್‌ಬಾಗ್, ಬೆಂಗಳೂರು-560 004

LAQ 2269

ಅನುಬಂಧ-4

ತೋಟಗಾರಿಕಾ ಇಲಾಖೆಯಿಂದ ರೈತರಿಗೆ ದೊರಕುತ್ತಿರುವ ಸೌಲಭ್ಯಗಳು ವಿವರಗಳು ಹಾಗೂ ಅವುಗಳನ್ನು ಪಡೆಯಲು ಇರುವ ನಿಯಮಗಳ ವಿವರಗಳು

ಸಾಮಾನ್ಯ ಅರ್ಹತೆಗಳು

1. ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಆಯ್ಕೆಗೆ ಪರಿಗಣಿಸಿದ ನಂತರ ದೊಡ್ಡ ರೈತರನ್ನು ಸಹಾಯಧನಕ್ಕಾಗಿ ಪರಿಗಣಿಸುವುದು.
2. ಈ ಹಿಂದೆ ಇಲಾಖೆಯಿಂದ ಯಾವುದೇ ಸಹಾಯಧನ ಪಡೆಯದ ಹೊಸ ಫಲಾನುಭವಿಗಳಿಗೆ ಆದ್ಯತೆ ನೀಡುವುದು.
3. ಈ ಹಿಂದೆ ಇಲಾಖೆಯಿಂದ ಸಹಾಯಧನ ಪಡೆದ ಫಲಾನುಭವಿಗಳು ಕಾರ್ಯಕ್ರಮದ ಸರ್ಮಪಕ / ಸದ್ಬಳಕೆ ಮಾಡದಿದ್ದಲ್ಲಿ ಅಂತಹ ಫಲಾನುಭವಿಗಳನ್ನು ಹೊಸ ಘಟಕ/ಕಾರ್ಯಕ್ರಮಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ ಆಯ್ಕೆಗೆ ಪರಿಗಣಿಸಬಾರದು.
4. ಯಾವುದೇ ಫಲಾನುಭವಿಯು ಹಿಂದಿನ ಮೂರು ವರ್ಷಗಳ ಅವಧಿಯಲ್ಲಿ ಸೌಲಭ್ಯವನ್ನು ಪಡೆದಿದ್ದರೆ ಈ ಸಾಲಿನಲ್ಲಿ ಅಂತಹ ಫಲಾನುಭವಿಯನ್ನು ಪರಿಗಣಿಸಬಾರದು.
5. ಪೂರಕ ಘಟಕಗಳು ಒಂದೇ ವರ್ಷದಲ್ಲಿ ಒದಗಿಸಲು ಸಾಧ್ಯವಾಗದಿದ್ದಲ್ಲಿ ಅಂತಹ ಘಟಕಗಳನ್ನು ಮುಂದಿನ ವರ್ಷದಲ್ಲಿ ಒದಗಿಸಲು ಪರಿಗಣಿಸಬಹುದು.
6. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಪ್ರತಿಫಲಾನುಭವಿಗೆ 2 ಕಿರು ಘಟಕಗಳು ಅಥವಾ ಒಂದು ಪ್ರಧಾನ ಘಟಕವನ್ನು ನೀಡಬಹುದಾಗಿದೆ.
7. ಯಾವುದೇ ಸೌಲಭ್ಯಕ್ಕೆ ನಿಗಧಿಗಿಂತ ಅಧಿಕ ಅರ್ಜಿಗಳು ಬಂದಲ್ಲಿ ಅರ್ಹ ಇದ್ದ ಅರ್ಜಿಗಳನ್ನು ಮಾತ್ರ ಪರಿಗಣಿಸಿ ಜಿಲ್ಲಾಮಟ್ಟದಲ್ಲಿ ತೋಟಗಾರಿಕೆ ಉಪನಿರ್ದೇಶಕರು ಇವರ ಅಧ್ಯಕ್ಷತೆಯಲ್ಲಿ ಆಯಾ ತಾಲ್ಲೂಕಿನ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು / ಸಹಾಯಕ ತೋಟಗಾರಿಕೆ ನಿರ್ದೇಶಕರುಗಳನ್ನು ಒಳಗೊಂಡಂತೆ ಸಮಿತಿ ರಚಿಸಿ. ವಿವಿಧ ಯೋಜನೆಗಳಡಿ ಅಂತಿಮ ಫಲಾನುಭವಿ ಪಟ್ಟಿಯನ್ನು ತಯಾರಿಸುವುದು.
8. ತಾಲ್ಲೂಕು ಮಟ್ಟದಲ್ಲಿ ಸ್ವೀಕೃತವಾದ ಅರ್ಜಿಗಳನ್ನು ಮೀಸಲಾತಿವಾರು ನಿಗಧಿಪಡಿಸಲಾದ ಗುರಿಯನ್ವಯ ಪರಿಶಿಷ್ಟಜಾತಿ/ ಪರಿಶಿಷ್ಟಪಂಗಡ, ಮಹಿಳೆಯರು, ವಿಕಲಚೇತನರು, ಅಲ್ಪಸಂಖ್ಯಾತರು, ಸಣ್ಣ, ಅತಿಸಣ್ಣರೈತರುವರ್ಗವಾರು ವಿಂಗಡಿಸುವುದು.
9. ಮೀಸಲಾತಿವಾರು ನಿಗಧಿಪಡಿಸಲಾದ ಗುರಿಯನ್ವಯ ನಿಗಧಿತ ಸಂಖ್ಯೆಯಲ್ಲಿ ಅರ್ಜಿಗಳು ಸ್ವೀಕೃತವಾಗದಿದ್ದಲ್ಲಿ ಇನ್ನೂ ಹೆಚ್ಚಿನ ಪ್ರಚಾರ ನೀಡಿ ಗುರಿ ಸಾಧಿಸಲು ಪ್ರಯತ್ನಿಸುವುದು.
10. ತೋಟಗಾರಿಕೆ ಬೆಳೆಗಳ ಸಮಗ್ರ ಕೀಟ ನಿರ್ವಹಣೆ, ಅಲೂಗೆಡ್ಡೆ ಪ್ರಾತ್ಯಕ್ಷತೆ ಮುಂತಾದ ಅತೀ ಕಡಿಮೆ ಮೌಲ್ಯದ ಕಾರ್ಯಕ್ರಮಗಳಿಗೆ ಹೊಸ ಫಲಾನುಭವಿಗಳನ್ನು ಪರಿಗಣಿಸಿದ ನಂತರ ಈ ಹಿಂದೆ ಸದರಿ ಕಾರ್ಯಕ್ರಮದಡಿ ಸಹಾಯಧನ ಪಡೆದ ಫಲಾನುಭವಿಗಳನ್ನು ಪರಿಗಣಿಸಬಹುದಾಗಿದೆ.
11. ಪ್ರದೇಶ ವಿಸ್ತರಣೆ, ಹನಿ ನೀರಾವರಿ, ಸಂರಕ್ಷಿತ ಬೇಸಾಯ, ಪುನ:ಶ್ಚೇತನ, ಸಾವಯವ ಪದ್ದತಿ ಅಳವಡಿಕೆ, ಬೀಜೋತ್ಪಾದನೆ ಕಾರ್ಯಕ್ರಮಗಳಿಗೆ ಈ ಮೊದಲು ಸೌಲಭ್ಯ ಪಡೆದಿದ್ದಲ್ಲಿ ಆಯಾ ಯೋಜನೆಗಳ ಮಾರ್ಗಸೂಚಿಗಳನ್ವಯ ಗರಿಷ್ಟ ಪ್ರಮಾಣದ ಸೌಲಭ್ಯವನ್ನು ಪಡೆಯದೆ ಇರುವ ರೈತರು ಮತ್ತೆ ಸದರಿ ಕಾರ್ಯಕ್ರಮಗಳಿಗೆ ಸಹಾಯಧನ ಕೋರಿ ಪುನ: ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ಸಂದರ್ಭದಲ್ಲಿ ಸದರಿ ಕಾರ್ಯಕ್ರಮಗಳಡಿ ಯಾವುದೇ ಸಹಾಯಧನ ಪಡೆಯದ ಫಲಾನುಭವಿಗಳನ್ನು ಮೊದಲು ಪರಿಗಣಿಸುವುದು.
12. ಒಬ್ಬ ಫಲಾನುಭವಿ ಒಂದಕ್ಕಿಂತ ಹೆಚ್ಚು ಸೌಲಭ್ಯಗಳಿಗೆ ಅರ್ಜಿಸಲ್ಲಿ ಸಿದ್ದು, ಅವನು ಸಲ್ಲಿಸಿದ ಸೌಲಭ್ಯಗಳಿಗೆ ಸಾಕಷ್ಟು ಸಂಖ್ಯೆಯ ಇತರೆ ಫಲಾನುಭವಿಗಳು ಸಿಗದೆ ಇದ್ದಲ್ಲಿ ಅಂತಹ ಸಂದರ್ಭದಲ್ಲಿ ಸದರಿ ಫಲಾನುಭವಿಗಳಿಗೆ ಎರಡಕ್ಕಿಂತ ಹೆಚ್ಚಿನ ಕಾರ್ಯಕ್ರಮಗಳಿಗೆ ಸಹಾಯಧನವನ್ನು ನೀಡಬಹುದಾಗಿದೆ.

ತೋಟಗಾರಿಕೆ ಜಂಟಿ ನಿರ್ದೇಶಕರು (ಯೋಜನೆ)
ಲಾಲ್‌ಬಾಗ್, ಬೆಂಗಳೂರು-560 004

ಕರ್ನಾಟಕ ಸರ್ಕಾರ

ಸಂ:ಕೃಇ 166 ಪ್ರಿಸ್ 2018

ಕರ್ನಾಟಕ ಸರ್ಕಾರದ ಸಚಿವಾಲಯ
ಸುವರ್ಣಸೌಧ
ಬೆಳಗಾವಿ, ದಿನಾಂಕ:18.12.2018

ಇವರಿಂದ,

ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಇಲಾಖೆ,
ಸುವರ್ಣಸೌಧ, ಬೆಳಗಾವಿ

ಇವರಿಗೆ,

ಕಾರ್ಯದರ್ಶಿಗಳು,
ಕರ್ನಾಟಕ ವಿಧಾನ ಸಭೆ/ಪರಿಷತ್
ಸುವರ್ಣಸೌಧ,
ಬೆಳಗಾವಿ.

ಮಾನ್ಯರೆ,

ವಿಷಯ: ಮಾನ್ಯ ವಿಧಾನ ಸಭೆ/ಪರಿಷತ್ ಸದಸ್ಯರಾದ **ಶ್ರೀ.** [illegible] ರವರ ಚುಕ್ಕೆ ಗುರುತು/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2303 ಗೆ ಉತ್ತರ ಒದಗಿಸುವ ಬಗ್ಗೆ.

****

ಮಾನ್ಯ ವಿಧಾನ ಸಭೆ/ಪರಿಷತ್ ಸದಸ್ಯರಾದ **ಶ್ರೀ.** [illegible] ರವರ ಚುಕ್ಕೆ ಗುರುತು/ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2303 ಗೆ ಉತ್ತರದ 2<u>50</u> ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)

ಕರ್ನಾಟಕ ವಿಧಾನ ಸಭೆ

ಸದಸ್ಯರ ಹೆಸರು	:	ಶ್ರೀ ಸಿದ್ದು ಸವದಿ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**2303**
ಉತ್ತರಿಸಬೇಕಾದ ಸಚಿವರು	:	**ಕೃಷಿ ಸಚಿವರು**
ಉತ್ತರಿಸಬೇಕಾದ ದಿನಾಂಕ	:	**21-12-2018**

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೆ ರಾಜ್ಯದಲ್ಲಿರುವ ಕೃಷಿ ಭೂಮಿ ಎಷ್ಟು?	2015-16ನೇ ಸಾಲಿನ ಕೃಷಿ ಗಣತಿಯ ಪ್ರಕಾರ ರಾಜ್ಯದಲ್ಲಿ 117.24 ಲಕ್ಷ ಹೆಕ್ಟೇರ್‌ಗಳಷ್ಟು ಕೃಷಿ ಭೂಮಿ(ಕೃಷಿ ಭೂ ಹಿಡುವಳಿ)ಯಿರುತ್ತದೆ.
(ಆ)	ರಾಜ್ಯದಲ್ಲಿ ಪ್ರತಿ ವರ್ಷ ಎಷ್ಟು ಕೃಷಿ ಭೂಮಿ ಕಡಿಮೆಯಾಗುತ್ತಿದೆ; ಅದಕ್ಕೆ ಕಾರಣಗಳೇನು; ಇದನ್ನು ಹೇಗೆ ಸರಿದೂಗಿಸಲಾಗುವುದು;	2010-11ನೇ ಸಾಲಿನ ಕೃಷಿ ಗಣತಿಯ ಪ್ರಕಾರ ರಾಜ್ಯದಲ್ಲಿ 121.61 ಲಕ್ಷ ಹೆಕ್ಟೇರ್‌ಗಳಷ್ಟು ಕೃಷಿ ಭೂಮಿ(ಕೃಷಿ ಭೂ ಹಿಡುವಳಿ)ಯಿದ್ದು, 2015-16ನೇ ಕೃಷಿ ಗಣತಿಯಲ್ಲಿ 4.37 ಲಕ್ಷ ಹೆ.ಗಳಷ್ಟು ಕೃಷಿ ಭೂಮಿ(ಕೃಷಿ ಭೂ ಹಿಡುವಳಿ) ಕಡಿಮೆಯಾಗಿರುತ್ತದೆ. ಭೂ ಪರಿವರ್ತನೆ ಹಾಗೂ ಕೃಷಿ ಭೂಮಿಯನ್ನು ಕೃಷಿಯೇತರ ಚಟುವಟಿಕೆಗಳಿಗೆ ಬಳಸುತ್ತಿರುವುದು ಕೃಷಿ ಭೂಮಿ ಕಡಿಮೆಯಾಗಲು ಕಾರಣ. ನೂತನ ತಾಂತ್ರಿಕತೆಗಳ ಅಳವಡಿಕೆ, ಕೃಷಿ ಯಾಂತ್ರೀಕರಣ, ನೀರಿನ ಸಮರ್ಪಕ ಬಳಕೆ, ಮಿಶ್ರ ಬೆಳೆಪದ್ಧತಿ ಮುಂತಾದವುಗಳ ಅಳವಡಿಕೆಯಿಂದ ಬೆಳೆ ಸಾಂದ್ರತೆಯನ್ನು ಹೆಚ್ಚಿಸಿ, ಲಭ್ಯವಾಗುವ ಕೃಷಿ ಜಮೀನಿನಲ್ಲಿ ಒಟ್ಟಾರೆ ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ ಇದನ್ನು ಸರಿದೂಗಿಸಬಹುದಾಗಿದೆ.
(ಇ)	ರಾಜ್ಯದಲ್ಲಿ ಇರುವ ಒಟ್ಟು ಸವಳು ಭೂಮಿ ಎಷ್ಟು;	ಬೃಹತ್ ಮತ್ತು ಮಧ್ಯಮ ನೀರಾವರಿ ಯೋಜನೆಗಳಡಿ ರಾಜ್ಯದಲ್ಲಿ ಒಟ್ಟು 0.968 ಲಕ್ಷ ಹೆಕ್ಟೇರ್‌ನಷ್ಟು ಸವಳು ಭೂಮಿಯಿರುತ್ತದೆ.
(ಈ)	ರಾಜ್ಯದಲ್ಲಿರುವ ಒಣ ಮತ್ತು ನೀರಾವರಿ ಕೃಷಿಗೆ ಯೋಗ್ಯವಾದ ಭೂಮಿ ಎಷ್ಟು; ಕೃಷಿ ಭೂಮಿ ಕಡಿಮೆಯಾಗದ ಹಾಗೆ ತೆಗೆದುಕೊಂಡ ಕ್ರಮಗಳೇನು?	ಸಕಾಲಿಕ ಹಾಗೂ ವ್ಯಾಪಕ ಮಳೆಯಿಂದ ಮತ್ತು ಬೃಹತ್ ಹಾಗೂ ಮಧ್ಯಮ ನೀರಾವರಿ ಯೋಜನೆಗಳಡಿ ಕೆರೆ ಹಾಗೂ ಅಂತರ್ಜಲದಲ್ಲಿ ಶೇಖರಣೆಯಾಗುವ ನೀರಿನ ಪ್ರಮಾಣದ ಆಧಾರದ ಮೇರೆಗೆ ರಾಜ್ಯದಲ್ಲಿ ಒಣ ಹಾಗೂ ನೀರಾವರಿ ಕೃಷಿಗೆ ಯೋಗ್ಯವಾದ ಕೃಷಿ ಭೂಮಿಯ ವಿಸ್ತೀರ್ಣವು ವರ್ಷದಿಂದ ವರ್ಷಕ್ಕೆ ಬದಲಾಗುತ್ತಿರುತ್ತದೆ. ರಾಜ್ಯದಲ್ಲಿ ಸರಾಸರಿ 40.01 ಲಕ್ಷ ಹೆಕ್ಟೇರ್ ಒಟ್ಟು ನೀರಾವರಿ ಸಾಗುವಳಿ ವಿಸ್ತೀರ್ಣ ಹಾಗೂ 81.65 ಲಕ್ಷ ಹೆಕ್ಟೇರ್ ಒಟ್ಟು ಮಳೆಯಾಶ್ರಿತ ಸಾಗುವಳಿ ವಿಸ್ತೀರ್ಣ ಇರುತ್ತದೆ. ಕೃಷಿ ಭೂಮಿ ಕಡಿಮೆಯಾಗದ ಹಾಗೆ ತಡೆಯುವ ನಿಟ್ಟಿನಲ್ಲಿ, ಸರ್ಕಾರ ಜಲಾನಯನ ಅಭಿವೃದ್ಧಿ ಕಾರ್ಯಕ್ರಮದಡಿ ಬಂಜರು/ಪಾಳು ಭೂಮಿಯನ್ನು ವ್ಯವಸಾಯಕ್ಕೆ ಯೋಗ್ಯ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಅದಲ್ಲದೆ ಕೃಷಿ ಯೋಗ್ಯ ಭೂಮಿಯನ್ನು ಬೀಳು ಬಿಟ್ಟಿರುವ ರೈತರಿಗೆ ಕೃಷಿ ಭೂಮಿಯಲ್ಲಿ ವ್ಯವಸಾಯಕ್ಕಾಗಿ ಅಗತ್ಯ ಲಘು ನೀರಾವರಿ ಘಟಕಗಳನ್ನು, ಬಿತ್ತನೆಬೀಜ, ಸಸ್ಯ ಸಂರಕ್ಷಣಾ ಔಷಧಿ ಇತ್ಯಾದಿಗಳನ್ನು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ವ್ಯವಸಾಯದಲ್ಲಿ ಕೃಷಿ ಕಾರ್ಮಿಕರ ಕೊರತೆ ಹಾಗೂ ಉತ್ಪನ್ನ ವೆಚ್ಚಗಳನ್ನು ತಗ್ಗಿಸಲು ಕೃಷಿ ಯಾಂತ್ರೀಕರಣ ಯೋಜನೆಯಡಿಯಲ್ಲಿ ವಿವಿಧ ಉಪಕರಣಗಳನ್ನು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ.

ಸಂಖ್ಯೆ: ಕೃಇ 166 ಕೃಯೋಸ 2018

(ಶ್ರೀ ಎನ್ ಹೆಚ್ ಶಿವಶಂಕರ ರೆಡ್ಡಿ)
ಕೃಷಿ ಸಚಿವರು

ಕರ್ನಾಟಕ ಸರ್ಕಾರ

ಸಂಖ್ಯೆ: ಪಸಂಮೀ 156 ಪಸಸೇ 2018

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು ದಿನಾಂಕ: 19.12.2018

ಇವರಿಂದ :-
ಸರ್ಕಾರದ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
ಬೆಂಗಳೂರು.

ಇವರಿಗೆ :-
ಕಾರ್ಯದರ್ಶಿಗಳು,
ಕರ್ನಾಟಕ ವಿಧಾನಸಭೆ,
ಸುವರ್ಣ ವಿಧಾನ ಸೌಧ,
ಬೆಳಗಾವಿ.

ಮಾನ್ಯರೇ,

ವಿಷಯ:- ಮಾನ್ಯ ವಿಧಾನ ಸಭಾ ಸದಸ್ಯರಾದ ಡಾ. ಉಮೇಶ್.ಜಿ.ಜಾಧವ್ (ಚಿಂಚೋಳಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2258 ಕ್ಕೆ ಉತ್ತರಿಸುವ ಬಗ್ಗೆ.

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ವಿಧಾನ ಸಭಾ ಸದಸ್ಯರಾದ ಡಾ. ಉಮೇಶ್.ಜಿ.ಜಾಧವ್ (ಚಿಂಚೋಳಿ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2258 ಕ್ಕೆ ಕನ್ನಡ ಉತ್ತರದ 100 ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಎಂ. ಧನಂಜಯ) 19/12/18
ಪೀಠಾಧಿಕಾರಿ-2,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,
(ಪಶುಸಂಗೋಪನೆ-ಎ)
19/12/18

ಪ್ರತಿ:

ಮಾನ್ಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರ ಆಪ್ತ ಕಾರ್ಯದರ್ಶಿ, ಸುವರ್ಣಸೌಧ, ಬೆಳಗಾವಿ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2258
ಸದಸ್ಯರ ಹೆಸರು : ಡಾ. ಉಮೇಶ್.ಜಿ.ಜಾಧವ್ (ಚಿಂಚೋಳಿ)
ಉತ್ತರಿಸುವ ದಿನಾಂಕ : 21.12.2018
ಉತ್ತರಿಸುವ ಸಚಿವರು : ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ)	ಚಿಂಚೋಳಿ ಮತ ಕ್ಷೇತ್ರದಲ್ಲಿ ಬರ್‌ನ ಕಾಳಗಿ ಪಟ್ಟಣವನ್ನು ಹೊಸ ತಾಲ್ಲೂಕು ಎಂದು ಘೋಷಿಸಲಾಗಿದ್ದು, ಈ ತಾಲ್ಲೂಕಿಗೆ ಪಶುಸಂಗೋಪನಾ ಇಲಾಖೆಯಿಂದ ಪ್ರತ್ಯೇಕ ತಾಲ್ಲೂಕಿನ ವ್ಯಾಪ್ತಿಯ ಗ್ರಾಮಗಳನ್ನು ಪ್ರತ್ಯೇಕಿಸಿ ಅಧಿಸೂಚನೆ ಹೊರಡಿಸಲಾಗಿದೆಯೇ ಮತ್ತು ತಾಲ್ಲೂಕು ಮಟ್ಟದ ಕಛೇರಿ ಸ್ಥಾಪಿಸಲು ಹಾಗೂ ಸಹಾಯಕ ನಿರ್ದೇಶಕರ ಹುದ್ದೆ ಸೃಜಿಸಲು ಯಾವಾಗ ಕ್ರಮಕೈಗೊಳ್ಳಲಾಗುವುದು:	ಚಿಂಚೋಳಿ ಮತ ಕ್ಷೇತ್ರದ ಕಾಳಗಿ ಪಟ್ಟಣವನ್ನು ಹೊಸ ತಾಲ್ಲೂಕು ಎಂದು ಕಂದಾಯ ಇಲಾಖೆಯು ಘೋಷಿಸಿ ಆದೇಶಿಸಿರುತ್ತದೆ. ಈ ತಾಲ್ಲೂಕಿಗೆ ಪಶುಸಂಗೋಪನಾ ಇಲಾಖೆಯಿಂದ ಈ ತಾಲ್ಲೂಕಿನ ವ್ಯಾಪ್ತಿಯ ಗ್ರಾಮಗಳನ್ನು ಪ್ರತ್ಯೇಕಿಸುವ ಅಧಿಸೂಚನೆ ಹೊರಡಿಸುವ ಪ್ರಕ್ರಿಯೆ ಇರುವುದಿಲ್ಲ. ಚಿಂಚೋಳಿ ಮತ ಕ್ಷೇತ್ರದಲ್ಲಿ ಕಾಳಗಿ ತಾಲ್ಲೂಕಿನ ಕಾಳಗಿಯಲ್ಲಿ ಪಶು ಆಸ್ಪತ್ರೆ ಕಾರ್ಯ ನಿರ್ವಹಿಸುತ್ತಿದೆ. ಸದರಿ ಆಸ್ಪತ್ರೆಯನ್ನು ಮುಂಬರುವ ದಿನಗಳಲ್ಲಿ ತಾಲ್ಲೂಕು ಆಸ್ಪತ್ರೆಯನ್ನಾಗಿ ಅಭಿವೃದ್ಧಿ ಪಡಿಸಲು ಅಗತ್ಯ ಕ್ರಮವಹಿಸಲಾಗುವುದು.
ಆ)	ಚಿಂಚೋಳಿ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಾಜಾಪುರ, ಹೆರೂರ.ಕೆ ಹಾಗೂ ಗೂಟುರ ಗ್ರಾಮ ಪಂಚಾಯಿತ್ ಕೇಂದ್ರ ಸ್ಥಾನಗಳಲ್ಲಿ ಪಶು ಚಿಕಿತ್ಸಾಲಯ ಪ್ರಾರಂಭಿಸುವ ಪಟ್ಟಿಯಲ್ಲಿ ಇದ್ದು ಸದರಿ ಪ್ರಸ್ತಾವನೆಯಲ್ಲಿರುವ 3 ಪಶುಚಿಕಿತ್ಸಾಲಯ ಗಳನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳದಿರಲು ಕಾರಣವೇನು?	2018-19 ನೇ ಸಾಲಿನಲ್ಲಿ ಇಲಾಖೆಯಲ್ಲಿ ಹೊಸದಾಗಿ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪ್ರಾರಂಭಿಸುವ ಯಾವುದೇ ಕಾರ್ಯಕ್ರಮವಿರುವುದಿಲ್ಲ.
ಇ)	ಈ ಇಲಾಖೆಯಲ್ಲಿ 2012 ರಲ್ಲಿ ಇಲಾಖಾ ನಿಯಮಗಳು ಪರಿಷ್ಕರಣೆ ಯಾಗಿದ್ದು ಅದರಂತೆ ಕಾಲಬದ್ಧ ಪದೋನ್ನತಿಯನ್ನು ಪಶುವೈದ್ಯರಿಗೆ 6 ವರ್ಷಕ್ಕೊಮ್ಮೆ ಮತ್ತು 13 ವರ್ಷಕ್ಕೊಮ್ಮೆ ನೀಡುವ ಅವಕಾಶ ವಿದ್ದರು ಈವರೆಗೂ ಏಕೆ ಪದೋನ್ನತಿ ನೀಡುತ್ತಿಲ್ಲ:	ಅರ್ಹ ಪಶುವೈದ್ಯಾಧಿಕಾರಿಗಳಿಗೆ 6 ಮತ್ತು 13 ವರ್ಷಗಳ ಕಾಲಬದ್ಧ ಪದೋನ್ನತಿಯನ್ನು ನೀಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.
ಈ)	ಇದರಿಂದ ಕೆಲವೊಂದು ವೈದ್ಯರು ಇಲಾಖೆ ಬಿಡುವ ಸಂಭವವಿರುವುದರಿಂದ ಅದಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ.:	ಉದ್ಭವಿಸುವುದಿಲ್ಲ.

ಸಂ: ಪಸಂಮೀ 155 ಪಸಸೇ 2018

